## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 262
2. ಮಾನ್ಯ ಸದಸ್ಯರ ಹೆಸರು : ಡಾ||ಚಂದ್ರಶೇಖರ ಬಸವರಾಜ ಪಾಟೀಲ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 18.08.2026
4. ಉತ್ತರಿಸುವ ಸಚಿವರು : ಮಾನ್ಯ ಸಕ್ಕರೆ ಮತ್ತು ಜವಳಿ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಬೀದರ್ ಜಿಲ್ಲೆಯ ರೈತರ ಜೀವನಾಡಿ BSSK (ಬಿ.ಎಸ್.ಎಸ್‌ಕೆ) ಸಕ್ಕರೆ ಕಾರ್ಖಾನೆ ಪ್ರಾರಂಭವಾಗಿದ್ದು, ಯಾವಾಗ; | ಬೀದರ್ ಜಿಲ್ಲೆ ಹುಮನಾಬಾದ್ ತಾಲ್ಲೂಕಿನ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ 1968-69 ನೇ ಹಂಗಾಮಿನಿಂದ ಕಬ್ಬು ಅರೆಯುವ ಕಾರ್ಯವನ್ನು ಪ್ರಾರಂಭಿಸಲಾಗಿರುತ್ತದೆ. |
| (ಆ) | ಕಾರ್ಖಾನೆಯ ಪ್ರಸ್ತುತ ಸ್ಥಗಿತಗೊಂಡಿರುವುದಕ್ಕೆ ಕಾರಣವೇನು; | ಹಳೆಯ ಯಂತ್ರೋಪಕರಣಗಳ ಬಳಕೆ ಮತ್ತು ತಂತ್ರಜ್ಞಾನ ಉನ್ನತೀಕರಣ ಹಾಗೂ ಆಧುನಿಕ ಉತ್ಪಾದನಾ ಪ್ರಕ್ರಿಯೆಗಳನ್ನು ಅಳವಡಿಸಿಕೊಳ್ಳದಿರುವುದು, ಎಥೆನಾಲ್, ಸಹ-ವಿದ್ಯುತ್ ಉತ್ಪಾದನೆ ಹಾಗೂ ಡಿಸ್ಟಿಲರಿ ಘಟಕಗಳನ್ನು ಅಭಿವೃದ್ಧಿಪಡಿಸದಿರುವುದು, ಹಾಗೂ ಆರ್ಥಿಕ ಸಂಕಷ್ಟ ಮತ್ತು ದುಡಿಯುವ ಬಂಡವಾಳದ ಕೊರತೆಯಿಂದಾಗಿ ಮೊದಲಿಗೆ 2019-20ನೇ ಹಂಗಾಮಿನಿಂದ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬು ಅರೆಯುವ ಕಾರ್ಯವನ್ನು ಸ್ಥಗಿತಗೊಳಿಸಲಾಗಿರುತ್ತದೆ.<br>ಮುಂದುವರಿದು, 2021-22ನೇ ಹಂಗಾಮಿನಲ್ಲಿ ಮಾತ್ರ ಕಬ್ಬು ಅರೆಯುವ ಕಾರ್ಯವನ್ನು ಕೈಗೊಂಡಿದ್ದು, ತದನಂತರ 2022-23ನೇ ಹಂಗಾಮಿನಿಂದ ಇದುವರೆವಿಗೂ ಕಾರ್ಖಾನೆಯಲ್ಲಿ ಕಬ್ಬು ಅರೆಯುವ ಕಾರ್ಯವನ್ನು ಸ್ಥಗಿತಗೊಳಿಸಲಾಗಿರುತ್ತದೆ. |
| (ಇ) | ಕಾರ್ಖಾನೆಯ ಮೇಲೆ ಇರುವ ಸಾಲ ಎಷ್ಟು; | ಪ್ರಸ್ತುತ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯು ರೂ.430.84 ಕೋಟಿಗಳ (ಅಸಲು ಮತ್ತು ಬಡ್ಡಿಯನ್ನು ಸೇರಿ) ಸಾಲವನ್ನು ಹೊಂದಿರುತ್ತದೆ. ವಿವರಗಳು ಈ ಕೆಳಕಂಡಂತೆ ಇರುತ್ತವೆ. |

ರೂ.ಕೋಟಿಗಳಲ್ಲಿ

| ಕ್ರ. ಸಂ. | ಬ್ಯಾಂಕಿನ ಹೆಸರು | ಬಾಕಿ ಇರುವ ಅಸಲು ಸಾಲದ ಮೊತ್ತ | ಬಡ್ಡಿ ಮೊತ್ತ | ಒಟ್ಟು ಮೊತ್ತ |
|---|---|---|---|---|
| 1 | ರಾಜ್ಯ ಸರ್ಕಾರದ ಸಾಲ | 40.81 | - | 40.81 |
| 2 | ಎನ್‌ಸಿಡಿಸಿ/ಎಸ್‌ಡಿಎಫ್ | 3.14 | - | 3.14 |
| 3 | ಡಿ.ಸಿ.ಸಿ. ಬ್ಯಾಂಕ್ ನಿಯಮಿತ. ಬೀದರ್ | 115.60 | 117.04 | 232.64 |
| 3 | ಅಪೆಕ್ಸ್ ಬ್ಯಾಂಕ್, ಬೆಂಗಳೂರು | 44.16 | 66.36 | 110.52 |
| 3 | ಎಸ್.ಬಿ.ಐ, ಕಲಬುರ್ಗಿ | 7.67 | 6.00 | 13.67 |
| 4 | ವೈಯಕ್ತಿಕ ಖಾತರಿ ಮೇಲೆ ಪಡೆದಿರುವ ಸಾಲ | 5.35 | - | 5.35 |
| 5 | ಕಾರ್ಮಿಕರ ವೇತನ ಬಾಕಿ ಪಾವತಿ | 24.71 | - | 24.71 |
| | **ಒಟ್ಟು ಮೊತ್ತ** | **241.44** | **189.40** | **430.84** |

.....2

| | | |
|---|---|---|
| (4) | ಈ ಕಾರ್ಖಾನೆಯನ್ನು ಸರ್ಕಾರವು ಪುನರ್ ಆರಂಭಿಸಿ, ರೈತರಿಗೆ ಅನುಕೂಲವಾಗುವಂತೆ ಮಾಡಿಕೊಡುವ ಉದ್ದೇಶ ಸರ್ಕಾರದ ಮುಂದೆ ಇದೆಯೇ ? | ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಪುನಶ್ಚೇತನಗೊಳಿಸುವ ಸಲುವಾಗಿ 2022-23ನೇ ಹಂಗಾಮಿನಿಂದ 40 ವರ್ಷಗಳ ಅವಧಿಗೆ LROT ಆಧಾರದ ಮೇಲೆ ಇದ್ದಲ್ಲಿ ಇದ್ದಂತೆಯೇ ಖಾಸಗಿಯವರಿಗೆ ಗುತ್ತಿಗೆ ನೀಡಲು ದಿನಾಂಕ:10.01.2023 ರಂದು ಅನುಮತಿಯನ್ನು ನೀಡಲಾಗಿತ್ತು. ಅದರಂತೆ, ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯಿಂದ ಎರಡು ಬಾರಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿತ್ತು. ಆದೇಶದ ಪ್ರತಿಯನ್ನು **ಅನುಬಂಧ-1 ರಲ್ಲಿ ಒದಗಿಸಿದೆ.** ಆದಾಗ್ಯೂ ಸಹ ಯಾರೊಬ್ಬ ಬಿಡ್ಡುದಾರರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲಿಲ್ಲ.<br><br>ದಿನಾಂಕ:24.02.2023 ರಂದು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಪ್ರಿ-ಬಿಡ್ ಸಭೆಯನ್ನು ಜರುಗಿಸಲಾಗಿದ್ದು, ಸಂಭವನೀಯ ಬಿಡ್ಡುದಾರರು ಟೆಂಡರ್ ಡಾಕ್ಯೂಮೆಂಟ್‌ನಲ್ಲಿ ಮತ್ತು ಸರ್ಕಾರ ಆದೇಶದಲ್ಲಿ ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳನ್ನು ಸಡಿಲಿಕೆ / ತಿದ್ದುಪಡಿ / ಬದಲಾಣೆಗಳನ್ನು ಮಾಡಲು ಕೋರಿದ್ದರು.<br><br>ಈ ಹಿನ್ನೆಲೆಯಲ್ಲಿ, ಟೆಂಡರ್ ಡಾಕ್ಯೂಮೆಂಟ್‌ನಲ್ಲಿ ಮತ್ತು ಸರ್ಕಾರ ಆದೇಶದಲ್ಲಿನ ಷರತ್ತು ಮತ್ತು ನಿಬಂಧನೆಗಳನ್ನು ಪರಿಷ್ಕರಿಸುವ ಕುರಿತು ಮರು ಪ್ರಸ್ತಾವನೆಯನ್ನು ಸಲ್ಲಿಸುವಂತೆ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರನ್ನು ಕೋರಲಾಗಿತ್ತು.<br><br>ದಿನಾಂಕ:19:08.2023ರಂದು ಸರ್ಕಾರದ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ, ಕಾರ್ಖಾನೆಗೆ ಸಾಲ ನೀಡಿರುವ ಬ್ಯಾಂಕುಗಳು ಅಂತಿಮವಾಗಿ ಎಷ್ಟು ಓಟಿ.ಎಸ್. ಮೊತ್ತಕ್ಕೆ ಒಪ್ಪುತ್ತವೆ ಎಂಬ ಬಗ್ಗೆ ಮಾಹಿತಿಯನ್ನು ಕಾರ್ಖಾನೆಯಿಂದ ಪಡೆದು ಸಲ್ಲಿಸುವಂತೆ ತೀರ್ಮಾನಿಸಲಾಗಿತ್ತು. ಅದರಂತೆ, ಕಾರ್ಖಾನೆಗೆ ಸಾಲ ನೀಡಿರುವ ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳು ಎಷ್ಟು ಓಟಿ.ಎಸ್ ಮೊತ್ತಕ್ಕೆ ಒಪ್ಪುತ್ತವೆ ಎಂಬ ಬಗ್ಗೆ ಪರಿಷ್ಕೃತ ಪ್ರಸ್ತಾವನೆ ಸಲ್ಲಿಸುವಂತೆ ಕಾರ್ಖಾನೆಗೆ ಸೂಚಿಸಲಾಗಿತ್ತು.<br><br>ಕಾರ್ಖಾನೆಯ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು ಮಾಹಿತಿಯನ್ನು ಸಲ್ಲಿಸಿ, ಏಕಕಾಲಿಕ ತೀರುವಳಿ ಯೋಜನೆಯಡಿ ಬಡ್ಡಿಯನ್ನು ಬ್ಯಾಂಕ್‌ನವರಿಗೆ ಮನ್ನಾ ಮಾಡುವಂತೆ ಕೋರಲಾಗಿದ್ದರೂ ಬ್ಯಾಂಕ್‌ಗಳಿಂದ ಯಾವುದೇ ಪ್ರತಿಕ್ರಿಯೆ ಬಂದಿರುವುದಿಲ್ಲವೆಂದು ತಿಳಿಸುತ್ತಾ, ಕಾರ್ಖಾನೆ ಹೊಂದಿರುವ ಬ್ಯಾಂಕುಗಳ ಸಾಲಗಳ ಮೇಲಿನ ಬಡ್ಡಿಯನ್ನು ಸರ್ಕಾರದ ಹಂತದಲ್ಲಿಯೇ ಮನ್ನಾ ಮಾಡುವಂತೆ ಹಾಗೂ ಕಬ್ಬು ಬೆಳೆಗಾರ ರೈತರು ಮತ್ತು ಕಾರ್ಮಿಕರ ಹಿತದೃಷ್ಟಿಯಿಂದ ಲೀಸ್ ಪ್ರಕ್ರಿಯೆ ಪೂರ್ಣಗೊಳಿಸಿ, ಕಾರ್ಖಾನೆಯನ್ನು ಪುನರ್ ಆರಂಭಿಸುವಂತೆ ಕೋರಿದ್ದರು.<br><br>ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ದಿನಾಂಕ:10.09.2024ರ ಪತ್ರದಲ್ಲಿ, ಕಾರ್ಖಾನೆಯನ್ನು ಗುತ್ತಿಗೆ ಪಡೆಯುವ ಸಂಬಂಧ ಸಂಭವನೀಯ ಬಿಡ್ಡುದಾರರು ಟೆಂಡರ್ ಡಾಕ್ಯೂಮೆಂಟ್‌ನಲ್ಲಿ ಹಾಗೂ ಸರ್ಕಾರದ ಆದೇಶದಲ್ಲಿ ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳನ್ನು ತಿದ್ದುಪಡಿ / ಬದಲಾವಣೆ ಮಾಡುವ ಬಗ್ಗೆ ಹಾಗೂ ಕಾರ್ಖಾನೆ ಹೊಂದಿರುವ ಹಣಕಾಸು ಸಂಸ್ಥೆಗಳ / ಬ್ಯಾಂಕುಗಳ ಸಾಲಗಳನ್ನು ಏಕಕಾಲಿಕ ತೀರುವಳಿ (ಓಟಿಎಸ್) ಯೋಜನೆಯಡಿಯಲ್ಲಿ ಮರುಪಾವತಿ ಮಾಡುವ ಬಗ್ಗೆ ಹಾಗೂ ಗುತ್ತಿಗೆ ನೀಡುವ ಮೂಲಕ ಪುನರ್ ಆರಂಭಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದರು. |

ಏತನ್ಮಧ್ಯೆ, ಈ ಕಾರ್ಖಾನೆಗೆ ನೀಡಿರುವ ಸಾಲಗಳು ಮರುಪಾವತಿಯಾಗದೇ ಸುಸ್ತಿಯಾಗಿರುವುದರಿಂದ ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ ಇವರ ಅನುಮತಿಯ ಮೇಲೆ ಬೀದರ್ ಜಿಲ್ಲಾ ಸಹಕಾರಿ ಬ್ಯಾಂಕಿನವರು SARFAESI Act 2002 (Securitisation and Reconstruction of Financial Assets and Enforcement of Security Interest Act) ರಡಿಯಲ್ಲಿ ದಿನಾಂಕ:16.12.2024ರಂದು ಕಾರ್ಖಾನೆಗೆ ಸೇರಿದ ಚರ ಹಾಗೂ ಸ್ಥಿರಾಸ್ತಿಗಳನ್ನು ಬಹಿರಂಗ ಹರಾಜು ಪ್ರಕ್ರಿಯೆಗೆ ಒಳಪಡಿಸಿದ್ದರು. ಸದರಿ ಹರಾಜಿನಲ್ಲಿ ರೂ.184.00 ಕೋಟಿಗಳಿಗೆ ಶ್ರೀಸುಭಾಷ ಗಂಗಾ ಹುಮನಾಬಾದ್ ಇವರಿಗೆ ಹರಾಜು ನೀಡಲಾಗಿರುತ್ತದೆ.

ಸರ್ಕಾರದ ಅನುಮತಿಯಿಲ್ಲದೆ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಹರಾಜು ಮಾಡಲು ಅನುಮತಿ ನೀಡಿದ ಜಿಲ್ಲಾಧಿಕಾರಿಗಳು ಬೀದರ್ ಜಿಲ್ಲೆ ಇವರ ನಿರ್ಧಾರದ ವಿರುದ್ಧ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರು ಮತ್ತು ಆಡಳಿತ ಮಂಡಳಿಯವರು ಸರ್ಕಾರಕ್ಕೆ ದೂರನ್ನು ದಾಖಲಿಸಿದ್ದರು.

ಈ ಹಿನ್ನಲೆಯಲ್ಲಿ ಕಾರ್ಖಾನೆಯು ಹೊಂದಿರುವ ಎಲ್ಲಾ ಸಮಸ್ಯೆಗಳ ಕುರಿತಾಗಿ ಚರ್ಚಿಸಲು ಅಂದಿನ ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರ ಅಧ್ಯಕ್ಷತೆಯಲ್ಲಿ ಹಾಗೂ ಅಂದಿನ ಮಾನ್ಯ ಅರಣ್ಯ ಜೀವಶಾಸ್ತ್ರ ಮತ್ತು ಪರಿಸರ ಸಚಿವರು ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಅಂದಿನ ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರ ಉಪಸ್ಥಿತಿಯಲ್ಲಿ ದಿನಾಂಕ:18.12.2024 ರಂದು ಸುವರ್ಣಸೌಧ, ಬೆಳಗಾವಿ ಇಲ್ಲಿ ಸಭೆಯನ್ನು ನಡೆಸಲಾಗಿತ್ತು. ಸದರಿ ಸಭೆಯ ನಿರ್ಣಯದಂತೆ, ಕಬ್ಬು ಬೆಳೆಯುವ ರೈತರು, ಕಾರ್ಮಿಕರು ಮತ್ತು ಇತರೆ ಹಣಕಾಸು ಸಂಸ್ಥೆಗಳನ್ನು ಗಮನದಲ್ಲಿ ಇಟ್ಟುಕೊಂಡು ಬೀದರ್ ಡಿ.ಸಿ.ಸಿ ಬ್ಯಾಂಕ್ ಇವರು ಹೊರಡಿಸಿರುವ ಹರಾಜು ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲು ತೀರ್ಮಾನಿಸಲಾಗಿತ್ತು. ನಡವಳಿಯ ಪ್ರತಿಯನ್ನು **ಅನುಬಂಧ-2 ರಲ್ಲಿ** ಒದಗಿಸಿದೆ.

ಅದರಂತೆ, ಬೀದರ್ ಡಿ.ಸಿ.ಸಿ ಬ್ಯಾಂಕ್ ಇವರು ಹೊರಡಿಸಿರುವ ಹರಾಜು ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ದಿನಾಂಕ:10.01.2025ರ ಪತ್ರದಲ್ಲಿ ಸಹಕಾರ ಇಲಾಖೆಯನ್ನು ಕೋರಲಾಗಿತ್ತು.

ಮುಂದುವರೆದು ಸದರಿ ಸಕ್ಕರೆ ಕಾರ್ಖಾನೆಯನ್ನು LROT ಆಧಾರದ ಮೇಲೆ ಗುತ್ತಿಗೆ ನೀಡುವ ಸಂಬಂಧ ಹಾಗೂ ಸಕ್ಕರೆ ಕಾರ್ಖಾನೆಗೆ ಸಂಬಂಧಿಸಿದ ಇತರೆ ವಿಷಯಗಳ ಕುರಿತು ಅಂದಿನ ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರ ಅಧ್ಯಕ್ಷತೆಯಲ್ಲಿ ಹಾಗೂ ಅಂದಿನ ಮಾನ್ಯ ಅರಣ್ಯ ಜೀವಶಾಸ್ತ್ರ, ಮತ್ತು ಪರಿಸರ ಸಚಿವರು, ಅಂದಿನ ಮಾನ್ಯ ಸಹಕಾರ ಸಚಿವರು ಮತ್ತು ಅಂದಿನ ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರ ಉಪಸ್ಥಿತಿಯಲ್ಲಿ ದಿನಾಂಕ:26.06.2025 ರಂದು ನಡೆದ ಸಭೆಯಲ್ಲಿ ಸರ್ಕಾರದ ವತಿಯಿಂದ ಕಾರ್ಖಾನೆಗೆ ಆರ್ಥಿಕ ನೆರವನ್ನು ಪಡೆಯುವ ಕುರಿತು ತೀರ್ಮಾನಿಸಲಾಗಿರುತ್ತದೆ. ನಡವಳಿಯ ಪ್ರತಿಯನ್ನು **ಅನುಬಂಧ-3ರಲ್ಲಿ** ಒದಗಿಸಿದೆ.

ಈ ಕಾರ್ಖಾನೆಯಲ್ಲಿ ಎಥನಾಲ್ ಘಟಕವನ್ನು ಮತ್ತು ಸಹ-ವಿದ್ಯುತ್ ಘಟಕವನ್ನು ಸ್ಥಾಪಿಸಲು ಹಾಗೂ ಹಾಲಿ ಇರುವ ಸಾಲಗಳ ಮರುಪಾವತಿಗಾಗಿ ರಾಜ್ಯ ಸರ್ಕಾರದ ಖಾತರಿ ಮೂಲಕ ರೂ.550.00 ಕೋಟಿಗಳಷ್ಟು ಆರ್ಥಿಕ ನೆರವು ನೀಡುವಂತೆ ಕೋರಿ ದಿನಾಂಕ:14.07.2025 ರಂದು ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮ (N.C.D.C) ನವದೆಹಲಿ ಇವರಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಪತ್ರದ ಪ್ರತಿಯನ್ನು **ಅನುಬಂಧ-4 ರಲ್ಲಿ** ಒದಗಿಸಿದೆ.

| | | |
|---|---|---|
| | | ವ್ಯವಸ್ಥಾಪಕ ನಿರ್ದೇಶಕರು, ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮ, ನವದೆಹಲಿ ಇವರ ದಿನಾಂಕ:06.08.2025ರ ಪತ್ರಗಳಲ್ಲಿ, ಬೀದರ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಒಳಗೊಂಡಂತೆ ಒಟ್ಟು 06 ಸಹಕಾರಿ ಸಕ್ಕರೆ ಕಾರ್ಖಾನೆಗಳು ಎನ್.ಸಿ.ಡಿ.ಸಿ.ಯ ನೇರ ಹಣಕಾಸು ಮಾನದಂಡಗಳನ್ನು ಪೂರೈಸದ ಕಾರಣ, ಕರ್ನಾಟಕ ರಾಜ್ಯ ಸರ್ಕಾರವು, ಪ್ರಾಥಮಿಕ ಸಾಲಗಾರನಾಗಿ ಸಹಕಾರಿ ಸಕ್ಕರೆ ಕಾರ್ಖಾನೆಗಳ ಪ್ರಸ್ತಾವನೆಗಳನ್ನು ಎನ್.ಸಿ.ಡಿ.ಸಿ.ಗೆ ಶಿಫಾರಸು ಮಾಡಬಹುದು ಎಂದು ಮತ್ತು ಅಂತಹ ಮೊತ್ತವನ್ನು ಸಂಬಂಧಿಸಿದ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ವರ್ಗಾಯಿಸಬಹುದು ಎಂದು ತಿಳಿಸಿರುತ್ತಾರೆ. ಸದರಿ ಪತ್ರದ ಪ್ರತಿಯನ್ನು **ಅನುಬಂಧ-5 ರಲ್ಲಿ** ಒದಗಿಸಿದೆ. ಈ ಕುರಿತು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗಿ "ಅರ್ಹತಾ ಸಮಸ್ಯೆಗಳಿಂದಾಗಿ ಎನ್.ಸಿ.ಡಿ.ಸಿ.ಯು ನೇರ ಹಣಕಾಸು ಮಾದರಿಗಳನ್ನು ಸ್ಪಷ್ಟವಾಗಿ ತಿರಸ್ಕರಿಸಿರುವುದರಿಂದ, ಪ್ರಸ್ತಾಪಿತ ಆರು ಸಕ್ಕರೆ ಕಾರ್ಖಾನೆಗಳ ಹಣಕಾಸು ಖಾತೆಗಳ (financial portfolios) ಪುನರ್ ರಚನೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ" ಆರ್ಥಿಕ ಇಲಾಖೆಯ ದಿನಾಂಕ:12.06.2026ರ ಟಿಪ್ಪಣಿಯಲ್ಲಿ ತಿಳಿಸಲಾಗಿದೆ. ಅದರಂತೆ, ಅರ್ಹತಾ ಸಮಸ್ಯೆಗಳಿಂದಾಗಿ ಎನ್.ಸಿ.ಡಿ.ಸಿ.ಯು ನೇರ ಹಣಕಾಸು ಮಾದರಿಗಳನ್ನು ಸ್ಪಷ್ಟವಾಗಿ ತಿರಸ್ಕರಿಸಿರುವುದರಿಂದ, ಪ್ರಸ್ತಾಪಿತ ಆರು ಸಕ್ಕರೆ ಕಾರ್ಖಾನೆಗಳ ಹಣಕಾಸು ಖಾತೆಗಳ (financial portfolios) ಪುನರ್ ರಚನೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ದಿನಾಂಕ:07.07.2026ರ ಪತ್ರದಲ್ಲಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಗೆ ತಿಳಿಸಲಾಗಿದೆ. ಸದರಿ ಪತ್ರದ ಪ್ರತಿಯನ್ನು **ಅನುಬಂಧ-6 ರಲ್ಲಿ** ಒದಗಿಸಿದೆ.<br><br>ಈ ಹಿನ್ನೆಲೆಯಲ್ಲಿ, ಬೀದರ್ ಸಹಕಾರ ಸಕ್ಕರೆ ಕಾರ್ಖಾನೆಯನ್ನು LROT ಆಧಾರದ ಮೇಲೆ ಖಾಸಗಿಯವರಿಗೆ ಗುತ್ತಿಗೆ ನೀಡಲು ಈಗಾಗಲೇ 2 ಭಾರಿ ಟೆಂಡರ್ ಕರೆದರೂ ಯಾರೂ ಭಾಗವಹಿಸದೇ ಇರುವುದರಿಂದ ಬಾಗಲಕೋಟೆ ಜಿಲ್ಲೆಯ ಮುಧೋಳ್ ತಾಲ್ಲೂಕಿನಲ್ಲಿರುವ ರನ್ನ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಗುತ್ತಿಗೆ ನೀಡಲು ಟೆಂಡರ್ ಷರತ್ತುಗಳಲ್ಲಿ ಅಳವಡಿಸಲಾಗಿರುವ ಷರತ್ತುಗಳನ್ನು ಬೀದರ್ ಸಹಕಾರ ಸಕ್ಕರೆ ಕಾರ್ಖಾನೆಗೆ ವಿಧಿಸಿ, ಮರು ಟೆಂಡರ್ ಕರೆಯಲು ಷರತ್ತು ಮತ್ತು ನಿಬಂಧನೆಗಳನ್ನು ಸಿದ್ಧಪಡಿಸಿ ಸಲ್ಲಿಸುವಂತೆ ಸರ್ಕಾರದ ಪತ್ರ ಸಂಖ್ಯೆ: ಸಿಐ 107 ಸಿಓಎಫ್ 2022 (ಭಾಗ-3) ದಿನಾಂಕ:24.04.2026 ರಲ್ಲಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಗೆ ತಿಳಿಸಲಾಗಿತ್ತು.<br><br>ಅದರಂತೆ, ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ದಿನಾಂಕ:01.08.2026ರ ಪತ್ರದೊಂದಿಗೆ ಪರಿಷ್ಕೃತ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಪ್ರಸ್ತುತ ಸದರಿ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ. |

**ಸಂಖ್ಯೆ:** ಸಿಐ 162 ಸಿಓಎಫ್ 2026

**(ರುದ್ರಪ್ಪ ಮಾನಪ್ಪ ಲಮಾಣಿ)**

ಸಕ್ಕರೆ ಮತ್ತು ಜವಳಿ ಸಚಿವರು

ಅನುಬಂಧ - 1

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ, ಹಳ್ಳಿಖೇಡ್, ಹುಮನಾಬಾದ್ ತಾಲ್ಲೂಕು, ಬೀದರ್ ಜಿಲ್ಲೆ - ಈ ಕಾರ್ಖಾನೆಯನ್ನು ಖಾಸಗಿಯವರಿಗೆ ಗುತ್ತಿಗೆ ಆಧಾರದ ಮೇಲೆ ನೀಡುವ ಬಗ್ಗೆ.

**ಓದಲಾಗಿದೆ:**
1. ದಿನಾಂಕ:24.12.2021ರಂದು ಜರುಗಿದ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯ 45ನೇ, 46ನೇ ಮತ್ತು 47ನೇ ವಾರ್ಷಿಕ ಮಹಾಸಭೆಯ ನಡವಳಿ.
2. ದಿನಾಂಕ:14.03.2022ರಂದು ಜರುಗಿದ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯ ತುರ್ತು ಆಡಳಿತ ಮಂಡಳಿ ಸಭೆಯ ನಡವಳಿ.
3. ವ್ಯವಸ್ಥಾಪಕ ನಿರ್ದೇಶಕರು, ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ, ಹಳ್ಳಿಖೇಡ್, ಹುಮನಾಬಾದ್ ತಾಲ್ಲೂಕು, ಬೀದರ್ ಜಿಲ್ಲೆ ಇವರ ಪತ್ರ ಸಂಖ್ಯೆ: ಬಿಸಸಕಾ/ಆಡಳಿತ/ಎಸ್-2/2022-23, ದಿನಾಂಕ:17.05.2022
4. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ: ಡಿಎಸ್‌ಕೆ/ಸಿಓಎಫ್/50/2021-22/196, ದಿನಾಂಕ:25.05.2022.
5. ಸರ್ಕಾರದ ಆದೇಶ ಸಂಖ್ಯೆ: ಸಿಐ 107 ಸಿಓಎಫ್ 2022, ದಿನಾಂಕ:23.08.2022
6. ಸರ್ಕಾರದ ಪತ್ರ ಸಂಖ್ಯೆ: ಸಿಐ 107 ಸಿಓಎಫ್ 2022, ದಿನಾಂಕ:25.07.2022.
7. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ: ಡಿಎಸ್‌ಕೆ/ಸಿಓಎಫ್/50/2021-22/776, ದಿನಾಂಕ:19.11.2022.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ಮತ್ತು (2)ರ ಸಭಾ ನಡವಳಿಗಳಲ್ಲಿ, 2019-20 ಮತ್ತು 2020-21ನೇ ಹಂಗಾಮುಗಳಲ್ಲಿ ಕಬ್ಬು ಅರೆಯುವ ಕಾರ್ಯ ನಡೆಯದೇ ಇರುವುದರಿಂದ ಅನೇಕ ಯಂತ್ರೋಪಕರಣಗಳು ಹಾಗೂ ಪೈಪ್‌ಲೈನ್‌ಗಳು ತುಕ್ಕು ಹಿಡಿದು ಹಾಳಾಗಿದ್ದು, ಕಾರ್ಖಾನೆಗೆ ಪಡೆದಿರುವ ಎಲ್ಲಾ ಸಾಲಗಳು ಎನ್.ಪಿ.ಎ ಆಗಿದ್ದು, ಕಾರ್ಖಾನೆಯ ಆರ್ಥಿಕ ಪರಿಸ್ಥಿತಿ ತುಂಬಾ ಕ್ಲಿಷ್ಟಕರವಾಗಿರುವುದರಿಂದ ಕಬ್ಬು ಬೆಳೆಯುವ ರೈತರ ಮತ್ತು ಕಾರ್ಮಿಕರ ಹಿತದೃಷ್ಟಿಯಿಂದ ಕಾರ್ಖಾನೆಯನ್ನು ಖಾಸಗಿಯವರಿಗೆ ದೀರ್ಘಾವಧಿಗೆ ಗುತ್ತಿಗೆ ನೀಡಿ ಪುನಶ್ಚೇತನಗೊಳಿಸಲು ತೀರ್ಮಾನಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(3) ರ ಪತ್ರದಲ್ಲಿ, ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಖಾಸಗಿಯವರಿಗೆ ಗುತ್ತಿಗೆ ನೀಡಿ ಪುನಶ್ಚೇತನಗೊಳಿಸುವ ಪ್ರಸ್ತಾವನೆಯನ್ನು ವ್ಯವಸ್ಥಾಪಕ ನಿರ್ದೇಶಕರು, ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ, ಹಳ್ಳಿಖೇಡ್, ಹುಮನಾಬಾದ್ ತಾಲ್ಲೂಕು, ಬೀದರ್ ಜಿಲ್ಲೆ ಇವರು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಗೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಪತ್ರದಲ್ಲಿ, ಕಬ್ಬು ಬೆಳೆಯುವ ರೈತರ ಮತ್ತು ಕಾರ್ಮಿಕರ ಹಿತದೃಷ್ಟಿಯಿಂದ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು 2022-23ನೇ ಹಂಗಾಮಿನಿಂದ ಎಲ್.ಆರ್.ಓ.ಟಿ. ಆಧಾರದ ಮೇಲೆ "ಇದ್ದಲ್ಲಿ ಇದ್ದಂತೆಯೇ" ಖಾಸಗಿಯವರಿಗೆ ಗುತ್ತಿಗೆ ನೀಡುವುದಕ್ಕೆ ಅನುಮತಿಯನ್ನು ನೀಡಲು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ. ಸದರಿ ಪ್ರಸ್ತಾವನೆಯಲ್ಲಿನ ವಿವರಗಳು ಈ ಕೆಳಕಂಡಂತೆ ಇರುತ್ತವೆ;

I. ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯು ಸಹಕಾರ ಸಂಘಗಳ ಕಾಯ್ದೆಯಡಿ 1968-69ರಲ್ಲಿ ನೋಂದಣಿಗೊಂಡಿರುತ್ತದೆ.

II. ಸಹಕಾರಿ ವಲಯದ ಈ ಕಾರ್ಖಾನೆಯಲ್ಲಿ ರಾಜ್ಯ ಸರ್ಕಾರವು ರೂ.4.64 ಕೋಟಿಗಳ ಷೇರು ಬಂಡವಾಳವನ್ನು ಹೊಂದಿರುತ್ತದೆ.

III. ಈ ಕಾರ್ಖಾನೆಯಲ್ಲಿ 3500 ಟಿ.ಸಿ.ಡಿ. ಸಾಮರ್ಥ್ಯದ ಕಬ್ಬು ಅರೆಯುವ ಘಟಕವಿರುತ್ತದೆ ಹಾಗೂ ಸಹ - ವಿದ್ಯುತ್ ಮತ್ತು ಡಿಸ್ಟಲರಿ, ಎಥೆನಾಲ್ ಘಟಕಗಳು ಇರುವುದಿಲ್ಲ.

IV. ಕಾರ್ಖಾನೆಯು ಒಟ್ಟು 176 ಎಕರೆ ಜಮೀನನ್ನು ಹೊಂದಿರುತ್ತದೆ. ಕಾರ್ಖಾನೆಗೆ ಪಡೆದಿರುವ ಸಾಲಗಳಿಗೆ ಎಲ್ಲಾ ಸ್ಥಿರಾಸ್ತಿಗಳನ್ನು ಅಡಮಾನವಿರಿಸಲಾಗಿದೆ.

V. ಕಾರ್ಖಾನೆಯು 25,760 ಷೇರುದಾರರನ್ನು ಹೊಂದಿದ್ದು, ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರ ಸಂಖ್ಯೆ 590 ಆಗಿರುತ್ತದೆ.

VI. ಕಾರ್ಖಾನೆಯು ಪ್ರಸ್ತುತ ಪಾವತಿಸಬೇಕಾದ ಸಾಲ ಮತ್ತು ಜವಾಬ್ದಾರಿಗಳ ಮೊತ್ತ ರೂ. 348.11 ಕೋಟಿಗಳ (ಅಸಲು + ಬಡ್ಡಿ) ಆಗಿರುತ್ತದೆ.

VII. 2021-22ನೇ ಹಂಗಾಮಿನಲ್ಲಿ ರೈತರ ಕಬ್ಬು ಬಿಲ್ಲು, ಕಬ್ಬು ಕಟಾವು ಮತ್ತು ಸಾಗಾಣಿಕೆ ಬಿಲ್ಲು, ಕಾರ್ಮಿಕರ ವೇತನ, ವಿದ್ಯುತ್ ಬಿಲ್ಲು ಮತ್ತು ಶಾಸನ ಬದ್ಧ ಬಾಕಿಗಳ ಮೊತ್ತ ರೂ.23.09 ಕೋಟಿಗಳನ್ನು ಪಾವತಿಸುವುದು ಬಾಕಿ ಇರುತ್ತದೆ. ಇದರಲ್ಲಿ ರೈತರ ಕಬ್ಬು ಬಿಲ್ಲು ಬಾಕಿ ರೂ.10.26 ಕೋಟಿಗಳಾಗಿರುತ್ತದೆ.

VIII. ದಿನಾಂಕ:31.03.2021ರ ಅಂತ್ಯಕ್ಕೆ ಕಾರ್ಖಾನೆಯ ಕ್ರೋಢೀಕೃತ ನಷ್ಟ ರೂ.290.00 ಕೋಟಿಗಳಾಗಿರುತ್ತದೆ.

IX. ಕಾರ್ಖಾನೆಯ Techno Commercial Viability ಬಗ್ಗೆ M/s. B Quest Techno Financial Consultancy and Service, LLP, Bengaluru ಇವರಿಂದ ಮೌಲ್ಯಮಾಪನ ಮಾಡಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ಆದೇಶದಲ್ಲಿ, ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ, ಹಳ್ಳಿಖೇಡ್, ಹುಮಾನಾಬಾದ್ ತಾಲ್ಲೂಕು, ಬೀದರ್ ಜಿಲ್ಲೆ - ಈ ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ಪಾವತಿಸಲು ಅವಶ್ಯವಿರುವ ರೂ.10.00 ಕೋಟಿಗಳ ಸಾಲವನ್ನು ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನಿಂದ ಪಡೆದುಕೊಳ್ಳಲು ರಾಜ್ಯ ಸರ್ಕಾರದ ಖಾತರಿಯನ್ನು ನೀಡಲಾಗಿದೆ. ಇದರಿಂದ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯು ಪ್ರಸ್ತುತ ಸಾಲ ಮತ್ತು ಜವಾಬ್ದಾರಿಗಳ ಮೊತ್ತ ರೂ.358.11 ಕೋಟಿಗಳಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (6)ರ ಪತ್ರದಲ್ಲಿ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು 2022-23ನೇ ಹಂಗಾಮಿನಿಂದ ಖಾಸಗಿಯವರಿಗೆ ಗುತ್ತಿಗೆ ನೀಡುವ ಸಂಬಂಧ ಕರಡು ಟೆಂಡರ್ ಡಾಕ್ಯುಮೆಂಟ್ ಅನ್ನು ಷರತ್ತುಗಳೊಂದಿಗೆ ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸುವಂತೆ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಗೆ ತಿಳಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (7)ರ ಪತ್ರದಲ್ಲಿ, ನಿರ್ದೇಶಕರು, ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಇವರಿಂದ ಸಿದ್ಧಪಡಿಸಲಾದ ಕರಡು ಟೆಂಡರ್ ಡಾಕ್ಯುಮೆಂಟ್ ಅನ್ನು ಪರಿಶೀಲಿಸಿ, ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು 2022-23ನೇ ಹಂಗಾಮಿನಿಂದ 2061-62ನೇ ಹಂಗಾಮಿನವರೆಗೆ 40 ವರ್ಷಗಳ ಅವಧಿಗೆ ಎಲ್.ಆರ್.ಓ.ಟಿ. ಆಧಾರದ ಮೇಲೆ "ಇದ್ದಲ್ಲಿ ಇದ್ದಂತೆಯೇ" ಖಾಸಗಿಯವರಿಗೆ ಗುತ್ತಿಗೆ ನೀಡುವ ಸಂಬಂಧ ಸೂಕ್ತ ನಿಬಂಧನೆ ಮತ್ತು ಷರತ್ತುಗಳನ್ನು ವಿಧಿಸಿ ಸರ್ಕಾರದ ಅನುಮೋದನೆಯನ್ನು ನೀಡುವಂತೆ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಧೀರ್ಘಾವಧಿಗೆ ಖಾಸಗಿಯವರಿಗೆ ಗುತ್ತಿಗೆ ನೀಡಿ ಪುನಶ್ಚೇತನಗೊಳಿಸುವುದು ಸರ್ಕಾರದ ಪ್ರಸ್ತುತ ನೀತಿಯಾಗಿರುತ್ತದೆ. ಇದುವರೆವಿಗೂ ಒಟ್ಟು 09 ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಖಾಸಗಿಯವರಿಗೆ ಗುತ್ತಿಗೆ ನೀಡಿ ಪುನಶ್ಚೇತನಗೊಳಿಸಲಾಗಿದೆ. ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದು, ಹಣಕಾಸು ಸಂಸ್ಥೆಗಳು / ಬ್ಯಾಂಕುಗಳಿಂದ ಸಾಲ ಪಡೆಯಲು ಸಾಧ್ಯವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಕಾರ್ಖಾನೆಗೆ ಮಡಿಯುವ ಬಂಡವಾಳವನ್ನು ಕ್ರೋಢೀಕರಿಸುವುದು ಕಷ್ಟವಾಗುತ್ತಿದೆ. ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಖಾಸಗಿಯವರಿಗೆ ಗುತ್ತಿಗೆ ನೀಡುವುದರಿಂದ, ಕಾರ್ಖಾನೆಯ ಸಾಲ ಮತ್ತು ಜವಾಬ್ದಾರಿಗಳನ್ನು ತೀರುವಳಿ ಮಾಡಲು, ಕಬ್ಬು ಬೆಳೆಯುವ ರೈತರ ಹಾಗೂ ಕಾರ್ಮಿಕರ ಹಿತಾಸಕ್ತಿಯನ್ನು ಕಾಪಾಡಲು ಅನುಕೂಲವಾಗಲಿದೆ. ಇದು ಈ ಪ್ರದೇಶದ ಆರ್ಥಿಕ ಅಭಿವೃದ್ಧಿಗೆ ಸಹಾಯಕವಾಗಲಿದೆ. ಆದ್ದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಸಿಐ 107 ಸಿಓಎಫ್ 2022 (ಭಾಗ-3)**
**ಬೆಂಗಳೂರು, 10 ನೇ ಜನವರಿ 2023**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ, ಹಳ್ಳಿಖೇಡ್, ಹುಮನಾಬಾದ್ ತಾಲ್ಲೂಕು, ಬೀದರ್ ಜಿಲ್ಲೆ- ಈ ಕಾರ್ಖಾನೆಯನ್ನು ಪುನಶ್ಚೇತನಗೊಳಿಸುವ ಸಲುವಾಗಿ 2022-23ನೇ ಹಂಗಾಮಿನಿಂದ 2061-62ನೇ ಹಂಗಾಮಿನವರೆಗೆ 40 ವರ್ಷಗಳ ಅವಧಿಗೆ ಎಲ್.ಆರ್.ಓ.ಟಿ. ಆಧಾರದ ಮೇಲೆ "ಇದ್ದಲ್ಲಿ ಇದ್ದಂತೆಯೇ" ಖಾಸಗಿಯವರಿಗೆ ಗುತ್ತಿಗೆ ನೀಡಲು ಈ ಕೆಳಕಂಡ ಷರತ್ತು ನಿಬಂಧನೆಗಳಿಗೆ ಒಳಪಟ್ಟು ಸರ್ಕಾರದ ಅನುಮತಿಯನ್ನು ನೀಡಿ ಆದೇಶಿಸಿದೆ.

**ಷರತ್ತು ಮತ್ತು ನಿಬಂಧನೆಗಳು:-**

1. ಕಾರ್ಖಾನೆಯನ್ನು ಗುತ್ತಿಗೆ ನೀಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ / ನಿಯಮಗಳನುಸಾರ/ಕಾಲಕಾಲಕ್ಕೆ ಹೊರಡಿಸಿದ ಸುತ್ತೋಲೆಗಳನುಸಾರ ಟೆಂಡರ್ ಕರೆಯುವುದು.
2. ಕಾರ್ಖಾನೆಯನ್ನು ಗುತ್ತಿಗೆ ನೀಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು 2000ರನ್ವಯ ಎರಡು ಲಕೋಟೆ ಪದ್ಧತಿಯಂತೆ ನಿರ್ವಹಿಸುವುದು ಹಾಗೂ ಟೆಂಡರ್ ಪ್ರಕ್ರಿಯೆಯನ್ನು ಹೆಚ್ಚು ಪ್ರಚಾರದಲ್ಲಿರುವ ಎರಡು ದಿನಪತ್ರಿಕೆ ( ಕನ್ನಡ ಮತ್ತು ಆಂಗ್ಲಭಾಷೆ) ಗಳಲ್ಲಿ ಪ್ರಕಟಣೆ ನೀಡತಕ್ಕದ್ದು.
3. ಕಾರ್ಖಾನೆಯು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳತಕ್ಕದ್ದು.
4. ಟೆಂಡರ್‌ಗೆ ಅರ್ಜಿ ಸಲ್ಲಿಸುವ ಬಿಡ್ಡುದಾರರು ಸಲ್ಲಿಸುವ ಟೆಂಡರ್‌ಗೆ ರೂ.1.00 ಕೋಟಿಗಳ ಇ.ಎಂ.ಡಿ. ಮೊತ್ತವನ್ನು ನಿಗದಿಪಡಿಸತಕ್ಕದ್ದು.
5. ಗುತ್ತಿಗೆದಾರರು ಗುತ್ತಿಗೆ ಒಪ್ಪಂದದ ಸಮಯದಲ್ಲಿ ನೀಡುವ ಭದ್ರತಾ ಠೇವಣಿ ಮೊತ್ತವನ್ನು ರೂ.5.00 ಕೋಟಿಗಳಿಗೆ ನಿಗದಿಗೊಳಿಸತಕ್ಕದ್ದು.
6. ಕಂಪನಿ ಅಥವಾ ಅದರ ಪಾಲುದಾರರು ಕನಿಷ್ಠ ರೂ.50.00 ಕೋಟಿಗಳ ಧನಾತ್ಮಕ ನಿವ್ವಳ ಮೌಲ್ಯವನ್ನು ಹೊಂದಿರಬೇಕು.
7. ಹಿಂದಿನ 3 ವರ್ಷಗಳಲ್ಲಿ ಬಿಡ್ಡುದಾರನ ಸರಾಸರಿ ವಾರ್ಷಿಕ ವಹಿವಾಟು ರೂ.200.00 ಕೋಟಿಗಿಂತ ಕಡಿಮೆಯಿರಬಾರದು. (2018-19 ರಿಂದ 2020-21).
8. ಟೆಂಡರ್ ಅನ್ನು ಅಂತಿಮಗೊಳಿಸಿದ ನಂತರದ ದಿನಾಂಕವನ್ನು ಆಧರಿಸಿ, ಕಾರ್ಖಾನೆಯನ್ನು ಗುತ್ತಿಗೆ ಪಡೆಯುವ ಗುತ್ತಿಗೆದಾರರು 2022-23 ಅಥವಾ 2023-24ನೇ ಹಂಗಾಮಿನಿಂದ ಕಬ್ಬು ಅರೆಯುವ ಕಾರ್ಯವನ್ನು ಪ್ರಾರಂಭಿಸುವುದು.
9. ಬಿಡ್ಡುದಾರನು ಕನಿಷ್ಠ 05 ವರ್ಷಗಳ ಕಾಲ ಸಕ್ಕರೆ ಕಾರ್ಖಾನೆಯನ್ನು ಅಥವಾ ಡಿಸ್ಟಿಲರಿಯನ್ನು ಅಥವಾ ಸಹ-ವಿದ್ಯುತ್ ಘಟಕವನ್ನು ನಡೆಸಿರುವ ಅನುಭವವನ್ನು ಹೊಂದಿರತಕ್ಕದ್ದು ಅಥವಾ ಬಿಡ್ಡುದಾರನು ಸಕ್ಕರೆ ಕಾರ್ಖಾನೆಯನ್ನು ಸಮರ್ಥವಾಗಿ ನಡೆಸಲು ಬೇಕಾದ ಹಣಕಾಸಿನ ಭದ್ರತೆಯನ್ನು ಪ್ರಸ್ತುತಪಡಿಸುವುದು.
10. ಬಿಡ್ಡುದಾರನು ಹೂಡಿಕೆ ಯೋಜನೆಯನ್ನು ಅಂದರೆ, ಎಲ್.ಆರ್.ಓ.ಟಿ. ಆಧಾರದ ಮೇಲೆ ಕಾರ್ಖಾನೆಯನ್ನು ನಡೆಸಲು ಅಗತ್ಯವಾದ ಹಣಕಾಸು ಹೊಂದಿಸಿಕೊಳ್ಳುವ ಕುರಿತ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.
11. ಬಿಡ್ ಸಲ್ಲಿಕೆ ದಿನಾಂಕದಂದು ಸಾರ್ವಜನಿಕ ಸ್ವಾಮ್ಯದ ಉದ್ಯಮಗಳು ಸೇರಿದಂತೆ ಯಾವುದೇ ಸರ್ಕಾರದಿಂದ ಬಿಡ್‌ದಾರರನ್ನು ಕಪ್ಪು ಪಟ್ಟಿಗೆ ಸೇರಿಸಬಾರದು.
12. ಕಾರ್ಯನಿರ್ವಹಣೆ ಮಾಡದ ಕಾರಣ ಬಿಡ್ಡುದಾರನು ಬಿಡ್ ಸಲ್ಲಿಕೆ ದಿನಾಂಕಕ್ಕೆ ಸಾರ್ವಜನಿಕ ಸ್ವಾಮ್ಯದ ಉದ್ಯಮಗಳನ್ನು ಒಳಗೊಂಡಂತೆ ಯಾವುದೇ ಸರ್ಕಾರಿ ಏಜೆನ್ಸಿಗಳಿಂದ ಡೀಫಾಲ್ಟ್ / ಶಾರ್ಟ್ ಕ್ಲೋಸ್ ಆಗಿರಬಾರದು.
13. ಯಶಸ್ವಿ ಬಿಡ್ಡುದಾರರಿಂದ ಸ್ವೀಕೃತಿಯಾಗುವ ನಿವ್ವಳ ಪ್ರಸ್ತುತ ಮೌಲ್ಯವು(ಎನ್.ಪಿ.ವಿ ರೂ.358.11 ಕೋಟಿಗಳನ್ನು ಮೀರತಕ್ಕದ್ದು. ಎನ್.ಪಿ.ವಿ ಲೆಕ್ಕಾಚಾರ ಮಾಡುವಾಗ. 10% ರಷ್ಟು ರಿಯಾಯಿತಿ ಅಂಶವನ್ನು(discounting factor) ಪರಿಗಣಿಸುವುದು.
14. ಜಮೀನು, ಕಟ್ಟಡ, ಸ್ಥಾವರ ಮತ್ತು ಯಂತ್ರೋಪಕರಣಗಳು, ಕಾರ್ಖಾನೆಯ ಇತರ ಸಂಬಂಧಿತ ಉಪಕರಣಗಳು ಮತ್ತು ಕಾರ್ಖಾನೆಯ ಆಸ್ತಿಗಳನ್ನು ಯಾವುದೇ ಸಂದರ್ಭದಲ್ಲಿ ಗುತ್ತಿಗೆದಾರರು ಯಾವುದೇ ಹಣಕಾಸು ಸಂಸ್ಥೆಗಳಿಗೆ ಅಥವಾ ಇತರರಿಗೆ ಅಡಮಾನ, ಉಪ-ಗುತ್ತಿಗೆ ಅಥವಾ ಬಾಡಿಗೆಗೆ ಅಥವಾ ಭದ್ರತೆಯಾಗಿ ನೀಡಲಾಗುವುದಿಲ್ಲ. ಆದಾಗ್ಯೂ, ಒಪ್ಪಂದದಲ್ಲಿ ಅವಕಾಶ ಕಲ್ಪಿಸಿದಂತೆ, ಗುತ್ತಿಗೆದಾರರು ಸ್ಥಾಪಿಸಿದ ಹೊಸ ಸ್ವತ್ತುಗಳ ಮೇಲೆ ಋಣಭಾರವನ್ನು ಸೃಷ್ಟಿಸಲು ಗುತ್ತಿಗೆದಾರನು ಅರ್ಹತೆಯನ್ನು ಹೊಂದಿರುತ್ತಾನೆ.
15. ಎಥೆನಾಲ್ ಘಟಕದೊಂದಿಗೆ ಸಹ-ವಿದ್ಯುತ್ ಘಟಕ ಮತ್ತು ಡಿಸ್ಟಿಲರಿಗಳ ಆಧುನೀಕರಣ, ವಿಸ್ತರಣೆ ಮತ್ತು ಸ್ಥಾಪನೆಗಾಗಿ ಖರೀದಿಸಿದ ಸ್ಥಾವರ ಮತ್ತು ಯಂತ್ರೋಪಕರಣಗಳು, ಉಪಕರಣಗಳು ಇತ್ಯಾದಿಗಳು ಹೊಸದಾಗಿರಬೇಕು ಮತ್ತು ಯಾವುದೇ ಬಳಸಿದ/ಸೆಕೆಂಡ್ ಹ್ಯಾಂಡ್ ಯಂತ್ರಗಳು ಮತ್ತು ಉಪಕರಣಗಳನ್ನು ಸ್ವೀಕರಿಸಲಾಗುವುದಿಲ್ಲ.

16. ವಾರ್ಷಿಕ ಗುತ್ತಿಗೆ ಬಾಡಿಗೆಯಿಂದ ಬರುವ ಮೊತ್ತವನ್ನು ಸರ್ಕಾರದ ಬಾಕಿ ಮತ್ತು ಇತರ ಬಾಕಿಗಳ ನಡುವೆ ಸರಿಸಮ (pari-passu) ಆಧಾರದ ಮೇಲೆ ಹಂಚಿಕೆ ಮಾಡತಕ್ಕದ್ದು (ಒಂದೇ ವರ್ಗದ ಬಾಕಿಗಳ ಸಂದರ್ಭದಲ್ಲಿ) ಮತ್ತು ಇತರ ಎಲ್ಲಾ ಬಾಕಿಗಳಿಗಿಂತ ತೆರಿಗೆ / ಶಾಸನಬದ್ಧ ಬಾಕಿಗಳನ್ನು ಪಾವತಿಸಲು ಆದ್ಯತೆ ನೀಡತಕ್ಕದ್ದು.
17. ಏಕವ್ಯಕ್ತಿ ಬಿಡ್ಡುದಾರರು ಭಾಗಿಯಾದ ಸಂದರ್ಭದಲ್ಲಿ ಬಿಡ್‌ಅನ್ನು ಅಂತಿಮಗೊಳಿಸಲು ಸರ್ಕಾರದ ಪೂರ್ವಾನುಮತಿಯನ್ನು ಪಡೆಯತಕ್ಕದ್ದು.
18. ಯಶಸ್ವಿ ಬಿಡ್ಡುದಾರರು ಮತ್ತು ಕಾರ್ಖಾನೆಯ ನಡುವೆ ಮಾಡಿಕೊಳ್ಳುವ ಗುತ್ತಿಗೆ ಒಪ್ಪಂದದ ಕರಾರು ಪತ್ರಕ್ಕೆ ಆರ್ಥಿಕ ಇಲಾಖೆಯ ಪೂರ್ವಾನುಮತಿಯನ್ನು ಪಡೆದುಕೊಳ್ಳತಕ್ಕದ್ದು.
19. ಗುತ್ತಿಗೆದಾರರು ಗುತ್ತಿಗೆ ಅವಧಿಯಲ್ಲಿ ಕೇಂದ್ರ ಸರ್ಕಾರವು ನಿಗದಿಪಡಿಸಬಹುದಾದ ನ್ಯಾಯಯುತ ಮತ್ತು ಲಾಭದಾಯಕ ಬೆಲೆ (FRP) ಯಂತೆ ಹಾಗೂ ರಾಜ್ಯ ಸರ್ಕಾರವು ನಿಗದಿಪಡಿಸಬಹುದಾದ ರಾಜ್ಯ ಸಲಹಾ ಬೆಲೆಯಂತೆ ರೈತರ ಕಬ್ಬು ಬಿಲ್ಲನ್ನು ಸಕಾಲದಲ್ಲಿ ಪಾವತಿಸತಕ್ಕದ್ದು.
20. ಕಾರ್ಖಾನೆ ಮತ್ತು ಗುತ್ತಿಗೆದಾರರ ನಡುವೆ ಏರ್ಪಡುವ ಗುತ್ತಿಗೆ ಕರಾರಿನಲ್ಲಿ ವಿಧಿಸುವ ಎಲ್ಲಾ ಷರತ್ತು ಮತ್ತು ನಿಬಂಧನೆಗಳನ್ನು ಸಹ ಪಾಲಿಸತಕ್ಕದ್ದು.
21. ಕಾರ್ಖಾನೆಯು ಗುತ್ತಿಗೆದಾರರೊಂದಿಗೆ ಅಂತಿಮ ಕರಾರು ಮಾಡಿಕೊಳ್ಳುವ ಪೂರ್ವದಲ್ಲಿ ಒಪ್ಪಂದದ ದರ ಹಾಗೂ ಇತರೆ ಸಾಧಕ-ಬಾಧಕಗಳ ಬಗ್ಗೆ ಸರ್ಕಾರದ ಅನುಮೋದನೆ ಪಡೆದುಕೊಳ್ಳತಕ್ಕದ್ದು.
22. ಕಾರ್ಖಾನೆಯು ಮಾಡಿಕೊಳ್ಳುವ ಗುತ್ತಿಗೆ ಒಪ್ಪಂದದ ಕರಾರುಗಳಿಂದ ಸರ್ಕಾರದ ಮೇಲೆ ಯಾವುದೇ ರೀತಿಯ ಆರ್ಥಿಕ ಹೊರೆಯಾಗದಂತೆ ಕ್ರಮವಹಿಸತಕ್ಕದ್ದು.
23. ಕಾರ್ಖಾನೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ನೌಕರರ ಸೇವೆಯನ್ನು ಯಶಸ್ವಿ ಬಿಡ್ಡುದಾರರು ಮುಂದುವರಿಸಲು ಇಚ್ಛಿಸದೇ ಇದ್ದಲ್ಲಿ, ನೌಕರರಿಗೆ ಸ್ವಯಂ ನಿವೃತ್ತಿ ಯೋಜನೆ (ವಿ.ಆರ್.ಎಸ್.) ಜಾರಿಗೊಳಿಸುವ ಪೂರ್ವದಲ್ಲಿ ಸರ್ಕಾರದ ಪೂರ್ವಾನುಮತಿಯನ್ನು ಪಡೆಯತಕ್ಕದ್ದು.
24. ಗುತ್ತಿಗೆಯಿಂದ ಬರುವಂತಹ ಹಣದಿಂದ ಕೇಂದ್ರ ಸರ್ಕಾರದ, ರಾಜ್ಯ ಸರ್ಕಾರದ, ಬ್ಯಾಂಕುಗಳ ಹಾಗೂ ಇತರೆ ಶಾಸನಬದ್ಧ ಬಾಕಿಗಳನ್ನು ಆದ್ಯತೆಯ ಮೇಲೆ ತೀರಿಸಲು ಕ್ರಮವಹಿಸತಕ್ಕದ್ದು.
25. ಕಾರ್ಖಾನೆಯನ್ನು ಗುತ್ತಿಗೆ ಪಡೆಯುವವರು ಗುತ್ತಿಗೆ ಅವಧಿ ಮುಗಿದ ನಂತರ ಯಾವುದೇ ರೀತಿಯ ಹೊಣೆಗಾರಿಕೆ / ಋಣಭಾರಗಳಿಲ್ಲದೆ ಕಾರ್ಖಾನೆಯನ್ನು ಆಡಳಿತ ಮಂಡಳಿಗೆ ವರ್ಗಾಯಿಸತಕ್ಕದ್ದು.
26. ಕಾರ್ಖಾನೆ ಮತ್ತು ಗುತ್ತಿಗೆದಾರರ ನಡುವೆ ಏರ್ಪಡಬಹುದಾದ ಗುತ್ತಿಗೆ ಕರಾರಿನಲ್ಲಿ ವಿಧಿಸಬಹುದಾದ ಷರತ್ತು ಮತ್ತು ನಿಬಂಧನೆಗಳನ್ನು ಸಹ ಪಾಲಿಸತಕ್ಕದ್ದು.
27. ಕರಡು ಟೆಂಡರ್ ಡಾಕ್ಯುಮೆಂಟಿನಲ್ಲಿ ಮೇಲ್ಕಂಡ ಷರತ್ತು ಮತ್ತು ನಿಬಂಧನೆಗಳನ್ನು ಯಥೋಚಿತವಾಗಿ ಅಳವಡಿಸುವುದು.

ಈ ಆದೇಶವನ್ನು ದಿನಾಂಕ:22.12.2022ರಂದು ಜರುಗಿದ ಸಚಿವ ಸಂಪುಟ ಸಭೆಯು ಕಾರ್ಯಸೂಚಿಯಲ್ಲಿನ ಕ್ರಮ ಸಂಖ್ಯೆ: 28(ಪ್ರಕರಣ ಸಂಖ್ಯೆ:ಸಿ-749/2022)ರಲ್ಲಿ ನೀಡಿರುವ ಅನುಮೋದನೆಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶಾಂತಾರಾಮ್) 10/1/23
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ (ಸಕ್ಕರೆ)

**ಇವರಿಗೆ:-** ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ವಿಕಾಸಸೌಧ, ಬೆಂಗಳೂರು (ಈ ಆದೇಶವನ್ನು ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸುವಂತೆ ಹಾಗೂ 25 ಪ್ರತಿಗಳನ್ನು ಈ ಇಲಾಖೆಗೆ ಒದಗಿಸುವಂತೆ ಕೋರಿದೆ)

ಪ್ರತಿಗಳು:-

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್‌ಎಸ್‌ಎ) ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ' ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560 001.
2. ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ) ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560 001.
3. ಪ್ರಧಾನ ಮಹಾಲೇಖಪಾಲರು (ಎ & ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು-560 001.
4. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಸಿ.ಟಿ.ಎಸ್.ನಂ:4125/1, ಬಿ.ಗಣೇಶಪುರ ರಸ್ತೆ, ಲಕ್ಷ್ಮೀಟೆಕ್, ಬೆಳಗಾವಿ-590009.
5. ಆಯುಕ್ತರು ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು - 560001.
6. ನಿರ್ದೇಶಕರು (ತಾಂತ್ರಿಕ ಕೋಶ) ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
7. ನಿರ್ದೇಶಕರು, ಪಿಂಚಣಿ, ಸಣ್ಣ ಉಳಿತಾಯ, ಆಸ್ತಿ ಮತ್ತು ಋಣ-ನಿರ್ವಹಣೆ ಇಲಾಖೆ, ವಿಶ್ವೇಶ್ವರಯ್ಯ ಗೋಪುರ, ಡಾ॥ ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು-560001.
8. ನಿರ್ದೇಶಕರು, ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಸಿ.ಟಿ.ಎಸ್.ನಂ:4125/1, ಬಿ.ಗಣೇಶಪುರ ರಸ್ತೆ, ಲಕ್ಷ್ಮೀಟೆಕ್, ಬೆಳಗಾವಿ-590009.
9. ಅಪರ ನಿರ್ದೇಶಕರು, (ನೀ&ಉ) ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ನಂ.49 ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
10. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು, ಮುಖ್ಯಮಂತ್ರಿಯವರ ಸಚಿವಾಲಯ, ವಿಧಾನಸೌಧ, ಬೆಂಗಳೂರು.
11. ಮಾನ್ಯ ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
12. ಮಾನ್ಯ ಸಹಕಾರ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
13. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
14. ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಸಚಿವ ಸಂಪುಟ ಶಾಖೆ, ವಿಧಾನಸೌಧ, ಬೆಂಗಳೂರು.
15. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ -1 ಮತ್ತು ಬಂ.ಹೂ), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
16. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ-2 & 10), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
17. ಸರ್ಕಾರದ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಎಂಎಸ್‌ಎಂಇ ಮತ್ತು ಗಣಿ)ಯವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
18. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆರವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿ ಕಟ್ಟಡ, ಬೆಂಗಳೂರು.
19. ಸರ್ಕಾರದ ಉಪ ಕಾರ್ಯದರ್ಶಿ (ಸಕ್ಕರೆ) ಯವರ ಪತ್ರಾಂಕಿತ ಆಪ್ತ ಸಹಾಯಕರು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ವಿಕಾಸಸೌಧ, ಬೆಂಗಳೂರು.
20. ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
21. ವ್ಯವಸ್ಥಾಪಕ ನಿರ್ದೇಶಕರು, ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ ಹಳ್ಳಿಖೇಡ್, ಹುಮನಾಬಾದ್ ತಾಲ್ಲೂಕು, ಬೀದರ್ ಜಿಲ್ಲೆ.
22. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.

ಅನುಬಂಧ - 2

**ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ (ನಿ) ಹಳ್ಳಿಖೇಡ್, ಹುಮ್ನಾಬಾದ್ ತಾಲ್ಲೂಕು, ಬೀದರ್ ಜಿಲ್ಲೆ – ಈ ಸಕ್ಕರೆ ಕಾರ್ಖಾನೆಯ ಸಮಸ್ಯೆ ಕುರಿತಾಗಿ ಚರ್ಚಿಸಲು ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರ ಅಧ್ಯಕ್ಷತೆಯಲ್ಲಿ ಹಾಗೂ ಮಾನ್ಯ ಅರಣ್ಯ ಜೀವಶಾಸ್ತ್ರ ಮತ್ತು ಪರಿಸರ ಸಚಿವರು ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರ ಉಪಸ್ಥಿತಿಯಲ್ಲಿ ದಿನಾಂಕ: 18.12.2024 ರಂದು 10.00 ಗಂಟೆಗೆ ಕೊಠಡಿ ಸಂಖ್ಯೆ: 318, 3ನೇ ಮಹಡಿ ಸುವರ್ಣ ಸೌಧ, ಬೆಳಗಾವಿ ಇಲ್ಲಿ ನಡೆದ ಸಭೆಯ ನಡಾವಳಿ**

**ಸಭೆಯಲ್ಲಿ ಹಾಜರಿದ್ದವರ ಪಟ್ಟಿ ಲಗತ್ತಿಸಿದೆ:**

ಮಾನ್ಯ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಇವರು ಮಾತನಾಡಿ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ (ನಿ) ಹಳ್ಳಿಖೇಡ್, ಹುಮ್ನಾಬಾದ್ ತಾಲ್ಲೂಕು, ಬೀದರ್ ಜಿಲ್ಲೆ – ಈ ಸಕ್ಕರೆ ಕಾರ್ಖಾನೆಯ ಸಮಸ್ಯೆ ಕುರಿತಾಗಿ ಚರ್ಚಿಸಲು ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರ ಅಧ್ಯಕ್ಷತೆಯಲ್ಲಿ ಹಾಗೂ ಮಾನ್ಯ ಅರಣ್ಯ ಜೀವಶಾಸ್ತ್ರ ಮತ್ತು ಪರಿಸರ ಸಚಿವರು. ಬೀದರ್ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಶ್ರೀ ರಹೀಂ ಖಾನ್ ಪೌರಾಡಳಿತ ಮತ್ತು ಹಜ್ ಸಚಿವರು, ಹಾಗೂ ಬೀದರ್ ಜಿಲ್ಲೆಯ ಎಲ್ಲಾ ಮಾನ್ಯ ಶಾಸಕರು, ಮಾಜಿ ಶಾಸಕರು, ಕಾರ್ಖಾನೆಯ ಕಾರ್ಮಿಕರು/ಸದಸ್ಯರು ಹಾಗೂ ಸರ್ಕಾರದ ಎಲ್ಲಾ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು.

ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಬೀದರ್ ತಾಲ್ಲೂಕು, ಬೀದರ್ ಜಿಲ್ಲೆ ಕಾರ್ಖಾನೆಯ ಅಧ್ಯಕ್ಷರಾದ ಶ್ರೀ ಸುಭಾಷ ಕಲ್ಲೂರ ಇವರು ಮಾತನಾಡಿ ಕಾರ್ಖಾನೆಯ ನಷ್ಟ ರೂ.350.00 ಕೋಟಿ ಇದ್ದು, ಗುತ್ತಿಗೆ ನೀಡುವ ಸಂದರ್ಭದಲ್ಲಿ ಗುತ್ತಿಗೆ ಷರತ್ತುಗಳಿಗೆ ಸಡಿಲಿಕೆ ಮಾಡಿಕೊಡುವಂತೆ ಕೋರಿದರು. ಆದರೆ ಕಾರ್ಖಾನೆಯ ಜಮೀನನ್ನು ಡಿ.ಸಿ.ಸಿ. ಬ್ಯಾಂಕ್ ವಶ ಪಡೆಸಿಕೊಂಡಿರುತ್ತದೆ. ಡಿ.ಸಿ.ಸಿ ಬ್ಯಾಂಕಿನ ಸಾಲ ಮತ್ತು ಬಡ್ಡಿ ಸೇರಿ ರೂ.232.64 ಕೋಟಿ ಗಳಿದ್ದು, ಕಾರ್ಖಾನೆಯನ್ನು ಹರಾಜು ಮಾಡಿರುತ್ತಾರೆ. ಆದರೆ ರೈತರ

ಮತ್ತು ಕಾರ್ಮಿಕರ ಹಿತದೃಷ್ಟಿಯಿಂದ ಕಾರ್ಖಾನೆಯನ್ನು ಗುತ್ತಿಗೆ ನೀಡುವುದು ಅವಶ್ಯಕವಾಗಿರುತ್ತದೆ ಎಂದು ತಿಳಿಸಿದರು.

ಶ್ರೀ ರಾಜಶೇಖರ್ ಪಾಟೀಲ್, ಮಾಜಿ ಸಚಿವರು ಮಾತನಾಡಿ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಖಾಸಗಿಯವರಿಗೆ ಗುತ್ತಿಗೆ ನೀಡುವುದು ಸೂಕ್ತ ಎಂದು ತಿಳಿಸಿದರು.

ಡಾ॥ ಶೈಲೇಂದ್ರ ಬೆಲ್ದಾಳೆ, ಮಾನ್ಯ ವಿಧಾನ ಸಭಾ ಸದಸ್ಯರು, ಬೀದರ್ ದಕ್ಷಿಣ ಮತ ಕ್ಷೇತ್ರ, ಬೀದರ್ ಜಿಲ್ಲೆ ಇವರು ಮಾತನಾಡಿ ಕಾರ್ಖಾನೆಗೆ ಸರ್ಕಾರದಿಂದ ಸಹಾಯ ಧನ ನೀಡಲು ಕೋರಿರುತ್ತಾರೆ.

ಶ್ರೀ ಮುಳೆ ಮಾರುತಿರಾವ್, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು, ಬೀದರ್ ಜಿಲ್ಲೆ ಇವರು ಸಹ ಕಾರ್ಖಾನೆಯು ನಷ್ಟದಲ್ಲಿರುವುದರಿಂದ ಇದನ್ನು ಖಾಸಗಿಯವರಿಗೆ ಗುತ್ತಿಗೆ ನೀಡಲು ಕೋರಿದರು.

ಶ್ರೀ ಅರ್ಜುನ್ ಕಾರ್ಮಿಕ ಸಂಘದ ಅಧ್ಯಕ್ಷರು (BSSK) ಇವರು ಮಾತನಾಡಿ ತಾವು ಸುಮಾರು 35-38 ವರ್ಷಗಳಿಂದ ಕಾರ್ಖಾನೆಗೆ ಸೇವೆ ಸಲ್ಲಿಸುತ್ತಿದ್ದು, ಕಾರ್ಖಾನೆಯಲ್ಲಿ ಖಾಯಂ ಹಾಗೂ ಹಂಗಾಮಿ ನೌಕರರು ಇದ್ದು, 2016-17ನೇ ಸಾಲಿನಿಂದ ವೇತನ ಮತ್ತು ಶಾಸನಬದ್ಧ ಸೌಲಭ್ಯಗಳು ಬಾಕಿ ಸುಮಾರು ರೂ.98.00 ಕೋಟಿ ವೇತನ ನೀಡಬೇಕೆಂದು ಕೋರಿದರು. ಪ್ರಸ್ತುತ ಕಾರ್ಖಾನೆಯಲ್ಲಿ 225 ಜನ ಕಾರ್ಮಿಕರು ಇದ್ದು, ಕಾರ್ಖಾನೆಯನ್ನು ಮಾರಾಟ ಮಾಡದೇ ಪ್ರಸ್ತುತ ಇರುವ ಹರಾಜು ಪ್ರಕ್ರಿಯೆಯನ್ನು ತಡೆದು ಗುತ್ತಿಗೆ ನೀಡಬೇಕೆಂದು ಸಭೆಗೆ ಕೋರಿದರು.

ವ್ಯವಸ್ಥಾಪಕ ನಿರ್ದೇಶಕರು, ಡಿ.ಸಿ.ಸಿ ಬ್ಯಾಂಕ್ ಇವರು ಮಾತನಾಡಿ ಬ್ಯಾಂಕ್ ಪರಿಸ್ಥಿತಿ ಸಹ ಸರಿಯಿರುವುದಿಲ್ಲ, ಬ್ಯಾಂಕು ಸಂಕಷ್ಟದಲ್ಲಿದ್ದು, ನಬಾರ್ಡ್ ವತಿಯಿಂದ ಹಣಕಾಸು ಸೌಲಭ್ಯ ನೀಡುತ್ತಿಲ್ಲ ಎಂದು ತಿಳಿಸಿದರು. ಡಿ.ಸಿ.ಸಿ ಬ್ಯಾಂಕ್ ವತಿಯಿಂದ ಸುಮಾರು 65,000 ಕಬ್ಬು ಬೆಳೆಗಾರರಿಗೆ ರೂ.360.00 ಕೋಟಿ ಸಾಲ ನೀಡಲಾಗಿದೆ ಎಂದು ಸಭೆಗೆ ತಿಳಿಸಿದರು. ಅಲ್ಲದೆ ಬ್ಯಾಂಕ್ ಹಿತದೃಷ್ಟಿಯಿಂದ ಬೀದರ್

ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಹರಾಜು ಪ್ರಕ್ರಿಯೆಯಲ್ಲಿ ರೂ.184.00 ಕೋಟಿಗೆ ಹರಾಜಿನ ಮೂಲಕ ಮಾರಾಟ ಮಾಡಲಾಗಿದೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ ಇವರು ಮಾತನಾಡಿ SARFAESI Act ಅಡಿಯಲ್ಲಿ ಡಿ.ಸಿ.ಸಿ ಬ್ಯಾಂಕ್‌ನವರಿಗೆ ಹರಾಜು ಮಾಡಲು ಆದೇಶ ಹೊರಡಿಸಲಾಗಿದೆ. ಮುಂದುವರೆದು ಕಾರ್ಖಾನೆಯನ್ನು ಖಾಸಗಿಯವರಿಗೆ ಗುತ್ತಿಗೆ ನೀಡಲು ಸರ್ಕಾರದಿಂದ 2023 ರಲ್ಲಿ 40 ವರ್ಷಗಳವರೆಗೆ ಎಲ್.ಆರ್.ಓ.ಟಿ ಆಧಾರದ ಮೇಲೆ ಗುತ್ತಿಗೆ ನೀಡಲು ಕೆಲವು ಷರತ್ತುಗಳಿಗೆ ಒಳಪಟ್ಟು ಆದೇಶಿಸಲಾಗಿದೆ. ಆದರೆ ಯಾವೊಬ್ಬ ಬಿಡ್‌ದಾರರು ಭಾಗವಹಿಸದೇ ಇದ್ದ ಕಾರಣ ಟೆಂಡರ್ ಆಗಿರುವುದಿಲ್ಲ ಎಂದು ತಿಳಿಸಿದರು.

ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು, ಮಾತನಾಡಿ, ಅಪೆಕ್ಸ್ ಬ್ಯಾಂಕ್ ನಿಂದ ಎನ್.ಓ.ಸಿ ಪಡೆಯದೇ ಡಿ.ಸಿ.ಸಿ ಬ್ಯಾಂಕ್, ಬೀದರ್ ಇವರು ಸಂಬಂಧಿಸಿದ ಇಲಾಖೆ ಹಾಗೂ ಸರ್ಕಾರದ ಗಮನಕ್ಕೆ ತರದೇ ಹರಾಜು ಮಾಡಿರುವುದು ಕಂಡು ಬಂದಿರುತ್ತದೆ ಎಂದು ವ್ಯವಸ್ಥಾಪಕರ ನಿರ್ದೇಶಕರು ಡಿ.ಸಿ.ಸಿ ಬ್ಯಾಂಕ್, ಬೀದರ್ ಇವರಿಗೆ ಪ್ರಶ್ನಿಸಿದರು.

ಮುಂದುವರೆದು, ಮಾನ್ಯ ಅರಣ್ಯ ಜೀವಶಾಸ್ತ್ರ ಮತ್ತು ಪರಿಸರ ಇಲಾಖೆ ಸಚಿವರು ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಸಚಿವರು ಮಾತನಾಡಿ ಕಾರ್ಖಾನೆಯೊಂದಿಗೆ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯೊಂದಿಗೆ ಭಾವನ್ಮಾತಕ ಸಂಬಂಧ ಹೊಂದಿದ್ದು, ತಮ್ಮ ಪೂಜ್ಯ ತಂದೆಯವರು 1969-70 ರಲ್ಲಿ ಕಾರ್ಖಾನೆಯನ್ನು ಪ್ರಾರಂಭಿಸಿದ್ದು, ಇದೊಂದು ಕೃಷಿ ಆಧಾರಿತ ಕಾರ್ಖಾನೆಯಾಗಿದ್ದು, ಸಾವಿರಾರು ರೈತರು ಮತ್ತು ಕಾರ್ಮಿಕರಿಗೆ ನೆರವಾಗಿರುತ್ತದೆ ಎಂದು ಹೇಳುತ್ತಾ ಕಾರ್ಖಾನೆಯು ಪ್ರಾರಂಭದಲ್ಲಿ ಲಾಭದಾಯಕವಾಗಿದ್ದು, ಕಾಲಕಾಲಕ್ಕೆ ಹಾನಿಯಾಗುತ್ತಾ ಬಂದಿದೆ ಎಂದು ಸಭೆಗೆ ತಿಳಿಸಿದರು. ನಾನು ಕೂಡಾ ಸುಮಾರು 10-11 ವರ್ಷಗಳ ಕಾಲ ಕಾರ್ಖಾನೆಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದೇನೆ. ಆ ಸಂದರ್ಭದಲ್ಲಿ ಸರ್ಕಾರದ ಸಾಲ ಹೊರತು ಬ್ಯಾಂಕ್‌ಗಳಿಂದ ರೂ.28ಕೋಟಿ ಸಾಲ ಕಾರ್ಖಾನೆಯ ಮೇಲೆ ಇತ್ತು. 2008-09 ರಲ್ಲಿ ನಾನು ಕಾರ್ಖಾನೆಯ ಸೇವೆಯಿಂದ ಕಾರ್ಯಮುಕ್ತನಾಗಿದ್ದೇನೆ ಎಂದು ತಿಳಿಸಿದರು. ಕಾರ್ಖಾನೆಯು ತಾವು ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಸಂದರ್ಭದಲ್ಲಿ 6,50,000 ಮೆ.ಟನ್ ಗಳಷ್ಟು ಕಬ್ಬು ನುರಿಸಿ, ಶೇ.10.80 ಸಕ್ಕರೆ ಇಳುವರಿ ಆಗಿತ್ತು. 2015-16 ನೇ ಸಾಲಿನಲ್ಲಿ ಕಾರ್ಖಾನೆಯು 67,651 ಮೆ.ಟನ್‌ಷ್ಟು ಕಬ್ಬು ನುರಿಸಿ

ಶೇ.8.8 ಸಕ್ಕರೆ ಇಳುವರಿ ಆಗಿದ್ದು ಎಂದು ತಿಳಿಸುತ್ತಾ 2016-17 ನೇ ಸಾಲಿನಲ್ಲಿ ಕಾರ್ಖಾನೆಯು 48,329 ಮೆ.ಟನ್‌ಷ್ಟು ಕಬ್ಬು ನುರಿಸಿ ಶೇ.7.02 ಸಕ್ಕರೆ ಇಳುವರಿ ಹಾಗೂ 2017-18 ನೇ ಸಾಲಿನಲ್ಲಿ ಕಾರ್ಖಾನೆಯು 20,000 ಮೆ.ಟನ್‌ಷ್ಟು ಕಬ್ಬು ನುರಿಸಿ ಶೇ.3.66 ಸಕ್ಕರೆ ಇಳುವರಿ, 2018-19 ನೇ ಸಾಲಿನಲ್ಲಿ ಕಾರ್ಖಾನೆಯು 72,000 ಮೆ.ಟನ್‌ಷ್ಟು ಕಬ್ಬು ನುರಿಸಿ ಶೇ.6.85 ಸಕ್ಕರೆ ಇಳುವರಿಯಾಗಿರುತ್ತದೆ ಎಂದು ತಿಳಿಸಿದರು. 2019-20 ಮತ್ತು 2020-21 ನೇ ಸಾಲಿನಲ್ಲಿ ಕಾರ್ಖಾನೆಯು ಸ್ಥಗಿತಗೊಂಡಿರುತ್ತದೆ. 2021-22 ನೇ ಸಾಲಿನಲ್ಲಿ 54,000 ಮೆ.ಟನ್‌ಷ್ಟು ಕಬ್ಬು ನುರಿಸಿ ಶೇ.5 ಸಕ್ಕರೆ ಇಳುವರಿಯಾಗಿರುತ್ತದೆ ಎಂದು ತಿಳಿಸುತ್ತಾ, ಹೀಗೆ ಕ್ರಮೇಣವಾಗಿ ಸಕ್ಕರೆ ಇಳುವರಿ ಕುಂಠಿತವಾಗಿ ಬಂದಿರುತ್ತದೆ. ಇದು ಕಾರ್ಖಾನೆಯನ್ನು ನಡೆಸುವ ಪದ್ಧತಿ ಅಲ್ಲ ಎಂದು ತಿಳಿಸಿದರು. ಇದರಿಂದಾಗಿ ಕಾರ್ಖಾನೆಗೆ ನಷ್ಟವುಂಟಾಗಿ ಸಾಲದ ಹೊರೆಯಾಗಿರುತ್ತದೆ. ತಾವು ಸಚಿವರಾಗಿದ್ದಾಗ ರೂ.10 ಕೋಟಿಯಷ್ಟು ಸರ್ಕಾರದ ವತಿಯಿಂದ ಸಾಲವನ್ನು ಕಾರ್ಖಾನೆಗೆ ನೀಡಲಾಗಿತ್ತು ಹಾಗೂ ಶ್ರೀ ರಾಜಶೇಖರ್ ಪಾಟೀಲ್, ಸಚಿವರಾಗಿದ್ದಾಗ ಸುಮಾರು ರೂ.20 ಕೋಟಿಯಷ್ಟು ಸಾಲವನ್ನು ಕಾರ್ಖಾನೆಗೆ ನೀಡಲಾಗಿರುತ್ತದೆ ಎಂಬ ಮಾಹಿತಿಯನ್ನು ಸಭೆಗೆ ತಿಳಿಸಿದರು.

ಬೀದರ್ ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕ್ ರವರು ಬೀದರ್ ಜಿಲ್ಲೆಯ ವಿವಿಧ ಸಕ್ಕರೆ ಕಾರ್ಖಾನೆಗಳಿಗೆ ಸಾಲ ನೀಡಿರುವ ಬಗ್ಗೆ ಮಾಹಿತಿ ನೀಡಿದರು ಹಾಗೂ ಸದರಿ ಸಾಲಗಳು ಎನ್‌ಪಿಎಯಾಗಿ ಪರಿವರ್ತನೆಯಾಗಿರುತ್ತದೆ. ಕಾರ್ಖಾನೆಯನ್ನು ಅವೈಜ್ಞಾನಿಕವಾಗಿ ನಡೆಸಲಾಗಿರುವುದರಿಂದ ಬ್ಯಾಂಕ್‌ಗಳಿಗೆ ತೊಂದರೆಯಾಗಿದೆ ಎಂದು ತಿಳಿಸಿದರು.

ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಬೀದರ್ ತಾಲ್ಲೂಕು, ಬೀದರ್ ಜಿಲ್ಲೆ ಈ ಕಾರ್ಖಾನೆಗೆ ನಷ್ಟವಾಗಿರುವ ಕುರಿತು ವಿಚಾರಣೆ ನಡೆಸಲು ಮಾನ್ಯ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಗೆ ಸೂಚಿಸಿದರು ಹಾಗೂ ಸದರಿ ಕಾರ್ಖಾನೆಯನ್ನು ಮಾರಾಟ ಮಾಡುವ ಮನಸ್ಸು ತಮಗೆ ಇಲ್ಲವೆಂದು ತಿಳಿಸಿದರು.

ಆದ್ದರಿಂದ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಬೀದರ್ ತಾಲ್ಲೂಕು, ಬೀದರ್ ಜಿಲ್ಲೆ ಈ ಕಾರ್ಖಾನೆ, ಕಬ್ಬು ಬೆಳೆಯುವ ರೈತರು, ಕಾರ್ಮಿಕರು ಮತ್ತು ಡಿಸಿಸಿ ಬ್ಯಾಂಕ್ ಉಳಿಯಬೇಕೆಂದು ತಿಳಿಸುತ್ತಾ ಈ ಕೆಳಗಿನಂತೆ ತಮ್ಮ ಸಲಹೆ ನೀಡಿದರು.

1. ಕಾರ್ಖಾನೆಯನ್ನು ಗುತ್ತಿಗೆ ನೀಡುತ್ತಿರುವುದರಿಂದ ತಾತ್ಕಾಲಿಕವಾಗಿ ಹರಾಜು ಪ್ರಕ್ರಿಯೆಯನ್ನು ತಡೆ ಹಿಡಿಯುವ ಕುರಿತು ಸರ್ಕಾರದಿಂದ ಆದೇಶ ಹೊರಡಿಸಬೇಕು.
2. ಒಂದು ವಾರದೊಳಗಾಗಿ ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ, ಬೀದರ್ ಇವರ ಅಧ್ಯಕ್ಷತೆಯಲ್ಲಿ ಬ್ಯಾಂಕ್‌ರವರೊಂದಿಗೆ ಒನ್ ಟೈಮ್ ಸೆಟಲ್‌ಮೆಂಟ್ ಕುರಿತು ಚರ್ಚಿಸಬೇಕು.
3. ಕಾಲಮಿತಿಯಲ್ಲಿ ಕಾರ್ಖಾನೆಯನ್ನು ಗುತ್ತಿಗೆ ನೀಡುವ ಸಂಬಂಧ ಹಾಗೂ ಬ್ಯಾಂಕಿನವರಿಗೆ ಸಹ ಸಾಲವನ್ನು ಹಿಂದಿರುಗಿಸುವ ಕುರಿತು ಕ್ರಮ ಕೈಗೊಳ್ಳಲು ಸೂಚಿಸಿದರು.
4. ಸಚಿವ ಸಂಪುಟದಲ್ಲಿ ಕಾರ್ಖಾನೆಯನ್ನು ಗುತ್ತಿಗೆ ನೀಡುವ ಸಂಬಂಧ ಚರ್ಚಿಸಿ ಅನುಮತಿ ಪಡೆಯುವುದು.

ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯೊಂದಿಗೆ ಭಾವನಾತ್ಮಕ ಸಂಬಂಧ ಹೊಂದಿದ್ದು ಸದರಿ ಕಾರ್ಖಾನೆಯನ್ನು 1969-70 ರಲ್ಲಿ ಸ್ಥಾಪನೆ ಮಾಡಿದ್ದು, ಪ್ರಾರಂಭದಲ್ಲಿ ಕಾರ್ಖಾನೆಯು ಲಾಭದಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ಕಾರ್ಖಾನೆಯ ಸಕ್ಕರೆ ಇಳುವರಿಯೂ ಗಣನೀಯ ಕಡಿಮೆಯಾಗುತ್ತಾ ನಷ್ಟದಲ್ಲಿ ಬಂದಿದೆ ಎಂದು ತಿಳಿಸುತ್ತಾ ಸದರಿ ಕಾರ್ಖಾನೆಯ ವರ್ಷವಾರು ಇಳುವರಿಯ ವಿವರಗಳನ್ನು ಸಭೆಗೆ ತಿಳಿಸುತ್ತಾ ಪ್ರಸ್ತುತ ಕಾರ್ಖಾನೆಯು ನಷ್ಟಕ್ಕೊಳಗಾಗಿದೆ ಎಂದು ತಿಳಿಸುತ್ತಾ ಕಾರ್ಖಾನೆಯನ್ನು ಗುತ್ತಿಗೆ ನೀಡುವುದರ ಮೂಲಕ ಪುನಃಶ್ಚೇತನಗೊಳಿಸುವಂತೆ ಸಭೆಗೆ ತಿಳಿಸಿದರು.

ಸದರಿ ವಿಷಯವಾಗಿ ಸಭೆಯಲ್ಲಿ ಸುದೀರ್ಘ ಚರ್ಚೆಯ ನಂತರ ಈ ಕೆಳಕಂಡ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

1) ಮಾನ್ಯ ಅರಣ್ಯ ಜೀವಶಾಸ್ತ್ರ ಮತ್ತು ಪರಿಸರ ಇಲಾಖೆ ಸಚಿವರು ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಸಚಿವರು ಇವರ ಸಲಹೆಯಂತೆ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯಿಂದ ಪಾವತಿಸಲು ಬಾಕಿ ಇರುವ ಸಾಲದ ಸಂಬಂಧ ಬೀದರ್ ಕೇಂದ್ರ ಸಹಕಾರ ಬ್ಯಾಂಕ್‌ನವರು ಹೊರಡಿಸಿರುವ ಹರಾಜು ಪ್ರಕ್ರಿಯೆಯನ್ನು ತಡೆಯುವ ಸಂಬಂಧ ಸಹಕಾರ ಇಲಾಖೆಗೆ ಪತ್ರ ಬರೆಯುವುದು.

2) ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಗುತ್ತಿಗೆ/ಲೀಸ್ ನೀಡಲು, ಸಚಿವ ಸಂಪುಟಕ್ಕೆ ಪ್ರಸ್ತಾವನೆ ಸಲ್ಲಿಸುವುದು.

3) ಕಾರ್ಖಾನೆಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಕುರಿತು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ನಿಯಮ (64)ರಡಿ ವಿಚಾರಣೆ ನಡೆಸಲು ಆದೇಶ ಮಾಡಲಾಗಿದ್ದು, ವಿಚಾರಣೆಯನ್ನು ಅಂತಿಮಗೊಳಿಸಿ, ಅದರನ್ವಯ ಕ್ರಮ ಕೈಗೊಳ್ಳುವುದು.

4) ಕಾರ್ಖಾನೆಯು ವಿವಿಧ ಹಣಕಾಸು ಸಂಸ್ಥೆಗಳು/ಬ್ಯಾಂಕ್‌ಗಳಿಗೆ ಪಾವತಿಸಬೇಕಾದ ಸಾಲದ ಬಾಕಿಯನ್ನು ಏಕ ಕಾಲಿಕ ತೀರುವಳಿ (ಓ.ಟಿ.ಎಸ್) ಯೋಜನೆಯಡಿಯಲ್ಲಿ ಇತ್ಯರ್ಥಗೊಳಿಸುವ ಸಂಬಂಧ ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ಸಂಬಂಧಪಟ್ಟ ಸಭೆಯನ್ನು 15 ದಿನಗಳೊಳಗೆ ಸಭೆ ಕರೆದು ಸಂಧಾನ ನಡೆಸಿ ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

5) ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ ಇವರಿಂದ ಸ್ವೀಕೃತವಾಗುವ ಓ.ಟಿ.ಎಸ್ ಪ್ರಸ್ತಾವನೆ ಆಧಾರದ ಮೇಲೆ ಸರ್ಕಾರದ ಹಂತದಲ್ಲಿ ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ ರವರಿಂದ ಪ್ರಸ್ತಾವನೆ ಸ್ವೀಕರಿಸಿದ ದಿನಾಂಕದಿಂದ 15 ದಿನಗಳ ಒಳಗಾಗಿ ಸಂಬಂಧಪಟ್ಟವರ ಸಭೆಯನ್ನು ಕರೆದು ಓ.ಟಿ.ಎಸ್ ಯೋಜನೆಯನ್ನು ಅಂತಿಮಗೊಳಿಸಬೇಕು.

6) ತದನಂತರ ಸಂಭವನೀಯ ಬಿಡ್‌ದಾರರು ಪ್ರಸ್ತಾಪಿಸಿರುವಂತೆ ಟೆಂಡರ್ ಡಾಕ್ಯುಮೆಂಟ್ ಮತ್ತು ಸರ್ಕಾರದ ಆದೇಶದಲ್ಲಿ ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳ ತಿದ್ದುಪಡಿ/ಬದಲಾವಣೆ ಮಾಡುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳತಕ್ಕದ್ದು.

7) ಕಾರ್ಖಾನೆಯನ್ನು ಗುತ್ತಿಗೆ ನೀಡುವುದರ ಮೂಲಕ 2025-2026ನೇ ಸಾಲಿನ ಹಂಗಾಮನ್ನು ಅಕ್ಟೋಬರ್-2025ನೇ ಮಾಹೆಯಿಂದ ಪ್ರಾರಂಭಿಸತಕ್ಕದ್ದು.

ಸಭೆಯು ವಂದನಾರ್ಪಣೆಗಳೊಂದಿಗೆ ಮುಕ್ತಾಯಗೊಂಡಿತು.

ಅರಣ್ಯ, ಜೀವಶಾಸ್ತ್ರ ಮತ್ತು ಪರಿಸರ ಸಚಿವರು ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಸಚಿವರು
ಈಶ್ವರ ಬಿ. ಖಂಡ್ರೆ
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಇಲಾಖೆ ಹಾಗೂ ಕೃಷಿ ಮಾರುಕಟ್ಟೆ, ಸಚಿವರು

ಅನುಬಂಧ- 3

**ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ (ನಿ) ಹಳ್ಳಿಖೇಡ್, ಹುಮ್ನಾಬಾದ್ ತಾಲ್ಲೂಕು, ಬೀದರ್ ಜಿಲ್ಲೆ – ಈ ಸಕ್ಕರೆ ಕಾರ್ಖಾನೆಯನ್ನು LROT ಆಧಾರದ ಮೇಲೆ ಗುತ್ತಿಗೆ ನೀಡುವ ಸಂಬಂಧ ಹಾಗೂ ಸಕ್ಕರೆ ಕಾರ್ಖಾನೆಗೆ ಸಂಬಂಧಿಸಿದ ಇತರೆ ವಿಷಯಗಳ ಕುರಿತು ಚರ್ಚಿಸಲು ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರ ಅಧ್ಯಕ್ಷತೆಯಲ್ಲಿ ಹಾಗೂ ಮಾನ್ಯ ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು, ಮಾನ್ಯ ಸಹಕಾರ ಸಚಿವರು ಮತ್ತು ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರ ಉಪಸ್ಥಿತಿಯಲ್ಲಿ ದಿನಾಂಕ:26.06.2025 ರಂದು 11.00 ಗಂಟೆಗೆ ವಿಧಾನ ಸೌಧ ಕೊಠಡಿ ಸಂಖ್ಯೆ:313ರಲ್ಲಿ ನಡೆದ ಸಭೆಯ ನಡವಳಿಗಳು.**

**ಸಭೆಯಲ್ಲಿ ಹಾಜರಿದ್ದವರ ಪಟ್ಟಿ ಈ ಕೆಳಗಿನಂತಿದೆ.**

1. ಶ್ರೀ ಶಿವಾನಂದ ಪಾಟೀಲ್, ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಇಲಾಖೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವರು
2. ಶ್ರೀ ಈಶ್ವರ್ ಖಂಡ್ರೆ, ಮಾನ್ಯ ಅರಣ್ಯ, ಜೀವಶಾಸ್ತ್ರ ಮತ್ತು ಪರಿಸರ ಸಚಿವರು ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಸಚಿವರು
3. ಶ್ರೀ ಕೆ.ಎನ್ ರಾಜಣ್ಣ, ಮಾನ್ಯ ಸಹಕಾರ ಸಚಿವರು ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಸಚಿವರು
4. ಶ್ರೀ ರಹೀಂ ಖಾನ್, ಮಾನ್ಯ ಪೌರಾಡಳಿತ ಮತ್ತು ಹಜ್ ಖಾತೆ ಸಚಿವರು
5. ಡಾ|| ಶೈಲೇಂದ್ರ ಬೆಲ್ದಾಳೆ, ಮಾನ್ಯ ವಿಧಾನ ಸಭಾ ಸದಸ್ಯರು, ಬೀದರ್ ದಕ್ಷಿಣ ಮತ ಕ್ಷೇತ್ರ, ಬೀದರ್ ಜಿಲ್ಲೆ
6. ಶ್ರೀ ಮುಳೆ ಮಾರುತಿರಾವ್, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು, ಬೀದರ್ ಜಿಲ್ಲೆ
7. ಶ್ರೀ. ಭೀಮರಾವ್ ಪಾಟೀಲ್, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು, ಬೀದರ್ ಸ್ಥಳೀಯ ಸಂಸ್ಥೆಗಳು, ಬೀದರ್ ಜಿಲ್ಲೆ.

8. ಡಾ|| ಚಂದ್ರಶೇಖರ ಬಸವರಾಜ ಪಾಟೀಲ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು, ಪದವೀಧರ ಮತ ಕ್ಷೇತ್ರ, ಬೀದರ್ ಜಿಲ್ಲೆ
9. ಶ್ರೀ ರಾಜಶೇಖರ್ ಪಾಟೀಲ್, ಮಾಜಿ ಶಾಸಕರು, ಹುಮ್ನಾಬಾದ್ ತಾಲ್ಲೂಕು, ಬೀದರ್ ಜಿಲ್ಲೆ
10. ಶ್ರೀ ಅಮರ್ ಖಂಡ್ರೆ, ಅದ್ಯಕ್ಷರು, ಬೀದರ್ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ., ಬೀದರ್ ಜಿಲ್ಲೆ
11. ಶ್ರೀ ಶುಭಾಷ ಕಲ್ಲೂರ್, ಅಧ್ಯಕ್ಷರು, ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ ಲಿ., ಹಳ್ಳಿಖೇಡ್, ಹುಮ್ನಾಬಾದ್ ತಾಲ್ಲೂಕು, ಬೀದರ್ ಜಿಲ್ಲೆ
12. ಶ್ರೀ ಟಿ.ಎಚ್.ಎಂ ಕುಮಾರ್, ಸಹಕಾರ ಸಂಘಗಳ ನಿಬಂಧಕರು, ಬೆಂಗಳೂರು
13. ಶ್ರೀ ರವಿಕುಮಾರ್ ಎಂ ಆರ್, ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು.
14. ಶೀಮತಿ ಶಿಲ್ಪಾ ಶರ್ಮಾ, ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ, ಬೀದರ್.
15. ಶ್ರೀ ಸಿ.ಎನ್ ದೇವರಾಜ್, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ (ನಿ), ಬೆಂಗಳೂರು.
16. ಶ್ರೀ ದಿಗಂಬರ ಸ್ವಾಮಿ, ವ್ಯವಸ್ಥಾಪಕ ನಿರ್ದೇಶಕರು, ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ ಲಿ., ಹಳ್ಳಿಖೇಡ್, ಹುಮ್ನಾಬಾದ್ ತಾಲ್ಲೂಕು, ಬೀದರ್ ಜಿಲ್ಲೆ.
17. ಶ್ರೀ ಅರ್ಜುನ್ ಟಿ, ಅಧ್ಯಕ್ಷರು, ಸಾಮನ್ಯ ಕಾರ್ಮಿಕ ಸಂಘ, ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ.
18. ಶ್ರೀ ಮಲ್ಲಿಕಾರ್ಜುನ್ ಬಂಡಾರಿ, ಅಧ್ಯಕ್ಷರು, ಎಸ್.ಸಿ/ಎಸ್.ಟಿ ನೌಕರರ ಸಂಘ, ಬೀದಲ್ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಹಳ್ಳಿಖೇಡ್

ಮಾನ್ಯ ಅರಣ್ಯ, ಜೀವಶಾಸ್ತ್ರ ಮತ್ತು ಪರಿಸರ ಸಚಿವರು ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಸಚಿವರು ಇವರು ಮಾತನಾಡಿ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ (ನಿ) ಹಳ್ಳಿಖೇಡ್, ಹುಮ್ನಾಬಾದ್ ತಾಲ್ಲೂಕು, ಬೀದರ್ ಜಿಲ್ಲೆ - ಈ ಸಕ್ಕರೆ ಕಾರ್ಖಾನೆಯನ್ನು LROT ಆಧಾರದ ಮೇಲೆ ಗುತ್ತಿಗೆ ನೀಡುವ ಸಂಬಂಧ ಹಾಗೂ ಸಕ್ಕರೆ ಕಾರ್ಖಾನೆಗೆ ಸಂಬಂಧಿಸಿದ ಇತರೆ ವಿಷಯಗಳ ಕುರಿತು ಚರ್ಚಿಸಲು ಸಭೆಯಲ್ಲಿ ಹಾಜರಿದ್ದ ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು,ಮಾನ್ಯ ಸಹಕಾರ ಸಚಿವರು ಮತ್ತು ಮಾನ್ಯ ಪೌರಾಡಳಿತ ಮತ್ತು ಹಜ್‌ಸಚಿವರು,ಹಾಗೂ ಸಭೆಗೆ

ಹಾಜರಾಗಿದ್ದ ಬೀದರ್ ಜಿಲ್ಲೆಯಮಾನ್ಯ ಶಾಸಕರು, ಅಧ್ಯಕ್ಷರು, ಬೀದರ್ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕ್, ಕಾರ್ಖಾನೆಯ ಕಾರ್ಮಿಕರು/ಸದಸ್ಯರು ಹಾಗೂ ಸರ್ಕಾರದ ಎಲ್ಲಾ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು.

ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಇವರು ಮಾತನಾಡಿ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆನಿ., ಹಳ್ಳಿಖೇಡ, ಬೀದರ್ ಜಿಲ್ಲೆ ಪ್ರಸ್ತುತ ಕಾರ್ಖಾನೆಯನ್ನು LROT ಆಧಾರದ ಮೇಲೆ ಗುತ್ತಿಗೆ ನೀಡುವ ಸಂಬಂಧ ದಿನಾಂಕ: 10.01.2023 ರಂದು ಸರ್ಕಾರ ಅನುಮತಿ ನೀಡಿರುತ್ತದೆ.ಕಾರ್ಖಾನೆಯನ್ನು ಗುತ್ತಿಗೆ ನೀಡುವ ಸಂಬಂಧ ಎರಡು ಬಾರಿ ಟೆಂಡರ್ ಕರೆದಿದ್ದರೂ ಸಹ ಯಾವುದೇ ಬಿಡ್ದುದಾರರು ಬಂದಿರುವುದಿಲ್ಲ. ಬಿಡ್ದುದಾರರು ಟೆಂಡರ್ ಡ್ಯಾಕ್ಯುಮೆಂಟ್‌ನಲ್ಲಿ ಪ್ರಮುಖವಾಗಿ ಈ ಕೆಳಕಂಡ ಎರಡು ಷರತ್ತುಗಳ ಬಗ್ಗೆ ಚರ್ಚಿಸಿರುತ್ತಾರೆ.

1. ಬೇರೆ ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು LROT ಆಧಾರದ ಮೇಲೆ ನೀಡಿರುವ ಗುತ್ತಿಗೆಯಲ್ಲಿ ಇಲ್ಲದೇ ಇರುವ ಷರತ್ತನ್ನು ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಗುತ್ತಿಗೆ ನೀಡುವ ಷರತ್ತಿನಲ್ಲಿ ಬಿಡ್ದುದಾರರ Net Present Value ರೂ.358 ಕೋಟಿ ಇರಬೇಕೆಂದು ಷರತ್ತು ವಿಧಿಸಲಾಗಿದೆ, ಇದನ್ನು ಕೈಬಿಡಬೇಕು ಎಂದು ಬಿಡ್‌ದಾರರು ತಿಳಿಸಿರುತ್ತಾರೆ.

2. ಕಾರ್ಖಾನೆಯ ಕಬ್ಬು ಅರೆಯುವ ಸಾಮರ್ಥ್ಯವನ್ನು 3500 ರಿಂದ 5000 ಟಿಸಿಡಿ ಗೆ ವಿಸ್ತರಿಸುವುದು, 90 ಕೆಎಲ್‌ಪಿಡಿ ಸಾಮರ್ಥ್ಯದ ಡಿಸ್ಟಲರಿ/ ಎಥಾನಾಲ್ ಯುನಿಟ್ ಸ್ಥಾಪಿಸಲು ಮತ್ತು 20 ಮೆ.ವ್ಯಾಟ್ ಸಾಮರ್ಥ್ಯದ ಸಹ ವಿದ್ಯುತ್ ಘಟಕ ಸ್ಥಾಪಿಸುವುದು ಎಂದು ಷರತ್ತಿರುತ್ತದೆ.ಇದರಲ್ಲಿ ಬಿಡ್ದುದಾರರು ಸರ್ಕಾರವು ಕಾರ್ಖಾನೆಯಿಂದ ಉತ್ಪಾದಿಸುವ ಸಹ ವಿದ್ಯುತ್‌ನ್ನು ಪ್ರತಿ ಯುನಿಟ್‌ಗೆ ರೂ.6/- ರಂತೆ ಖರೀದಿಸಬೇಕೆಂದು ಕೋರಿರುತ್ತಾರೆ ಎಂದು ತಿಳಿಸಿದರು.

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಅಪೆಕ್ಸ್ ಬ್ಯಾಂಕ್ ಇವರು ಮಾತನಾಡಿ ಅಪೆಕ್ಸ್ ಬ್ಯಾಂಕಿಗೆ ಅಸಲು ರೂ.44 ಕೋಟಿ ಮತ್ತು ಬಡ್ಡಿ ರೂ.177 ಕೋಟಿ ಒಟ್ಟು ರೂ.221 ಕೋಟಿಗಳಷ್ಟು ಸಾಲ ಮರುಪಾವತಿಸಬೇಕಾಗಿರುತ್ತದೆ.ಆದರೆ ಮಾನ್ಯ ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ ಇವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿಬಡ್ಡಿಯ ಮೊತ್ತವನ್ನು ರೂ.33.36 ಕೋಟಿಗಳಿಗೆ ಇಳಿಕೆ ಮಾಡಿರುವುದನ್ನು ಸಭೆಗೆ ತಿಳಿಸಿದರು.

ಏತನ್ಮಧ್ಯೆ ಮಾನ್ಯ ಸಹಕಾರ ಸಚಿವರು ಮಾತನಾಡಿ ಅಪೆಕ್ಸ್ ಬ್ಯಾಂಕ್‌ಗೆ OTS ಮೂಲಕ ಒಂದೇ ಬಾರಿಗೆ ಸಾಲದ ಅಸಲು ಮೊತ್ತ ರೂ.44.16 ಕೋಟಿ ಪಾವತಿಸಿದಲ್ಲಿ ಬಡ್ಡಿಯನ್ನು ಕೈಬಿಡುವಂತೆ ಸಲಹೆ ನೀಡಿದರು.ಅದೇ ರೀತಿ ಡಿಸಿಸಿ ಬ್ಯಾಂಕ್ ಬೀದರ್‌ಗೆ ಅಸಲು ರೂ.115.60 ಕೋಟಿ ಪಾವತಿಸಿದಲ್ಲಿ ಬಡ್ಡಿ ಮನ್ನಾ ಮಾಡುವಂತೆ ಸಲಹೆ ನೀಡಿದರು. ಇದಕ್ಕೆ ಅಧ್ಯಕ್ಷರು, ಬೀದರ್ ಜಿಲ್ಲಾ ಸಹಕಾರಿ ಬ್ಯಾಂಕ್ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಅಪೆಕ್ಸ್ ಬ್ಯಾಂಕ್ ಇವರು ಮಾತನಾಡಿ ಸದರಿ ವಿಷಯದ ಪ್ರಸ್ತಾವನೆಯನ್ನು ಬ್ಯಾಂಕ್‌ನ ಆಡಳಿತ ಮಂಡಳಿಯ ಗಮನಕ್ಕೆ ತಂದು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಸಭೆಗೆ ತಮ್ಮ ಅಭಿಪ್ರಾಯ ತಿಳಿಸಿದರು.

ಅಧ್ಯಕ್ಷರಾದ ಶ್ರೀ ಸುಭಾಷ ಕಲ್ಲೂರ ಇವರುಮಾತನಾಡಿ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು LROT ಆಧಾರದ ಮೇಲೆ ಖಾಸಗಿಯವರಿಗೆ ಗುತ್ತಿಗೆ ನೀಡಬೇಕೆಂದು ಹಾಗೂ ಕಾರ್ಖಾನೆಯನ್ನು ಪುನಃರಾರಂಭಿಸಬೇಕೆಂದು ಸಭೆಗೆ ಕೋರಿದರು.

ಮಾನ್ಯ ಅರಣ್ಯ, ಜೀವಶಾಸ್ತ್ರ ಮತ್ತು ಪರಿಸರ ಸಚಿವರು ಇವರು ಮಾತನಾಡಿ ಬೀದರ್ ಸಹಕಾರಿ ಬ್ಯಾಂಕ್ ಮತ್ತು ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ ಈ ಎರಡೂ ಸಂಸ್ಥೆಗಳು ಬೀದರ್ ಜಿಲ್ಲೆಯಲ್ಲಿ ಮಹತ್ವವನ್ನು ಪಡೆದಿರುತ್ತವೆ. ಬೀದರ್ ಜಿಲ್ಲಾ ಸಹಕಾರಿ ಬ್ಯಾಂಕ್ ಲಕ್ಷಾಂತರ ರೈತರಿಗೆ ಸಹಾಯವಾಗಿರುತ್ತದೆ ಮತ್ತು ಬೀದರ್ ಸಕ್ಕರೆ ಕಾರ್ಖಾನೆ ಜಿಲ್ಲೆಯ ಜೀವನಾಡಿಯಾಗುರುತ್ತದೆ ಎಂದು ಸಭೆಗೆ ತಿಳಿಸಿದರು. ಮುಂದುವರೆದು ಬೀದರ್ ಜಿಲ್ಲೆಯ ಸಹಕಾರಿ ಸಕ್ಕರೆ ಕಾರ್ಖಾನೆಗಳು ಪಡೆದಿರುವ ಸಾಲಗಳ ಮೊತ್ತವನ್ನು ಸಭೆಗೆ ವಿಶ್ಲೇಷಿಸಿದರು.

ಬೀದರ ಜಿಲ್ಲಾ ಸಹಕಾರಿ ಬ್ಯಾಂಕಿನ ಅಧ್ಯಕ್ಷರುಪ್ರಸ್ತುತ ಬ್ಯಾಂಕಿನಪರಿಸ್ಥಿತಿಯೂ Precarious condition ನಲ್ಲಿ ಇದ್ದು, ಸುಮಾರು ರೂ.1500 ಕೋಟಿಗಳಷ್ಟು Non performing asset(NPA) ಆಗಿದ್ದು, ಬ್ಯಾಂಕಿಗೆ ಹಣದ ಕೊರತೆಯಾಗಿರುತ್ತದೆ.ಆದ್ದರಿಂದ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯಿಂದ OTS ಮೂಲಕ ಸಾಲ ಮರುಪಾವತಿಸಿದಲ್ಲಿ ಬ್ಯಾಂಕಿಗೆ ಸಹಾಯವಾಗುತ್ತದೆ ಮತ್ತುಕಾರ್ಖಾನೆ ವತಿಯಿಂದ ಡಿಸಿಸಿ ಬ್ಯಾಂಕ್‌ಗೆ ಬರಬೇಕಾದ ಮೊತ್ತವನ್ನು ಒಂದೇ ಬಾರಿ ಪಾವತಿಸಿದಲ್ಲಿ ಬಡ್ಡಿಯನ್ನು ಮನ್ನಾ ಮಾಡುವ ಬಗ್ಗೆ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ ಸಭೆಯ ನಿರ್ಣಯವನ್ನು ತಿಳಿಸಲಾಗುವುದೆಂದು ಹೇಳಿದರು.

ಡಾ|| ಶೈಲೇಂದ್ರ ಬೆಲ್ದಾಳೆ, ಮಾನ್ಯ ವಿಧಾನ ಸಭಾ ಸದಸ್ಯರು, ಬೀದರ್ ದಕ್ಷಿಣ ಮತ ಕ್ಷೇತ್ರ, ಬೀದರ್ ಜಿಲ್ಲೆ ಇವರು ಮಾತನಾಡಿ ಕಾರ್ಖಾನೆಯ ಹರಾಜು ಪ್ರಕ್ರಿಯೆ ಸ್ಥಗಿತಗೊಂಡಿದ್ದು, ಕಾರ್ಖಾನೆಯನ್ನು LROT ಆಧಾರದ ಮೇಲೆ ಗುತ್ತಿಗೆ ನೀಡುವ ಸಂಬಂಧ ಸರ್ಕಾರದಿಂದ ಕ್ರಮ ವಹಿಸಬೇಕೆಂದು ಸಭೆಗೆ ಕೋರಿದರು.

ಮಾನ್ಯ ಸಕ್ಕರೆ ಸಚಿವರು ಮಾತನಾಡಿ OTS ಯೋಜನೆಯಡಿ ಬ್ಯಾಂಕ್‌ಗಳ ಜೊತೆಗೆ ಕಾರ್ಖಾನೆಯ ಕಾರ್ಮಿಕರು, ಷೇರುದಾರರು ಮತ್ತು ರೈತರ ಬಾಕಿ ಕಬ್ಬಿನ ಹಣ ಪಾವತಿಸುವ ವಿಷಯಗಳನ್ನು ಸಹ ಪರಿಗಣಿಸತಕ್ಕದ್ದು ಎಂದು ತಿಳಿಸುತ್ತಾ, ಇದರಿಂದ ಬ್ಯಾಂಕ್ ಮತ್ತು ಸಕ್ಕರೆ ಕಾರ್ಖಾನೆಗಳು ಎರಡೂ ಉಳಿಬೇಕು ಇದರಿಂದ ರೈತರು, ಕಾರ್ಮಿಕರು, ಜನಸಾಮಾನ್ಯರಿಗೆ ಅನುಕೂಲವಾಗುತ್ತದೆ ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಮಾನ್ಯ ಸಹಕಾರ ಸಚಿವರು ಮಾತನಾಡಿ ಬೀದರ್ ಸ.ಸ.ಕಾರ್ಖಾನೆಯು ಸಹಕಾರಿ ವಲಯಕ್ಕೆ ಸೇರಿದ್ದು, ಕಾರ್ಖಾನೆಯ ಜಮೀನು 176ಎಕರೆಗಳಿದ್ದು, ಕಾರ್ಖಾನೆಗೆ ಸೇರಿದ ಭೂಮಿಯೇ ನಿವ್ವಳ ಮೌಲ್ಯವಾಗಿದ್ದು, ಕಾರ್ಖಾನೆಯ ಯಂತ್ರೋಪಕರಣಗಳು ಹಳೆಯದಾಗಿದ್ದು, ಇವುಗಳಿಗೆಯಾವುದೇ ಮೌಲ್ಯ ಇರುವುದಿಲ್ಲ, ಕಾರ್ಖಾನೆ ಮತ್ತು ಬ್ಯಾಂಕ್‌ನ್ನು ಉಳಿಸುವುದು ಎಲ್ಲಾ ಜನ ಪ್ರತಿನಿಧಿಗಳ ಆಶಯವಾಗಿರುತ್ತದೆ. ಆದ್ದರಿಂದಕಾರ್ಖಾನೆಯ ಭಾಗಶಃ ಭೂಮಿಯನ್ನು ಮಾರಾಟ ಮಾಡಿ OTS ಮೂಲಕ ಸಹಕಾರಿ ಬ್ಯಾಂಕ್‌ಗಳ ಸಾಲ ಮರುಪಾವತಿಸಿ ಮತ್ತು ಬ್ಯಾಂಕ್‌ಗಳಿಂದ ಕಡಿಮೆ ಬಡ್ಡಿ ದರದಲ್ಲಿ ಹೊಸದಾಗಿ ಸಾಲಪಡೆದು ಕಾರ್ಖಾನೆಯನ್ನು ನಡೆಸಲುಸಲಹೆ ನೀಡಿದರು.

ಮಾನ್ಯ ಪೌರಾಡಳಿತ ಸಚಿವರು ಮಾತನಾಡಿ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ನಡೆದಿರುವ ಅವ್ಯವಹಾರಗಳ ಕುರಿತು ವಿಚಾರಣೆ ನಡೆಸಿ ತಪ್ಪಿಸ್ಥರ ವಿರುದ್ಧ ಕ್ರಮ ಜರುಗಿಸಬೇಕಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ಶ್ರೀ ರಾಜಶೇಖರ್ ಪಾಟೀಲ್, ಮಾಜಿ ಸಚಿವರು ಮಾತನಾಡಿ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಖಾಸಗಿಯವರಿಗೆ LROT ಅಡಿಯಲ್ಲಿ ಗುತ್ತಿಗೆ ನೀಡುವುದು ಸೂಕ್ತ ಎಂದು ತಿಳಿಸಿದರು.

ಮಾನ್ಯ ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ ಸಚಿವರು ಮಾತನಾಡಿ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ ನಿ.,ಹಳ್ಳಿಖೇಡ, ಹುಮನಾಬಾದ

ತಾಲ್ಲೂಕು, ಬೀದರ್ ಜಿಲ್ಲೆ, ಈ ಕಾರ್ಖಾನೆ, ಕಬ್ಬು ಬೆಳೆಯುವ ರೈತರು, ಕಾರ್ಮಿಕರು ಮತ್ತು ಡಿಸಿಸಿ ಬ್ಯಾಂಕ್ ಉಳಿಯಬೇಕೆಂದು ತಿಳಿಸುತ್ತಾ ಒಂದು ವೇಳೆ ಕಾರ್ಖಾನೆಯನ್ನು ಮಾರಾಟ ಮಾಡಿದರೂ ಸಹ ಖರೀದಿದಾರರು ಸಕ್ಕರೆ ಕಾರ್ಖಾನೆಯನ್ನೇ ಪ್ರಾರಂಭಿಸತಕ್ಕದ್ದು, ಇಲ್ಲವಾದಲ್ಲಿ ಈ ಕೆಳಗಿನಂತೆ ತಮ್ಮ ಸಲಹೆ ನೀಡಿದರು.

1. ಕಾರ್ಖಾನೆಯನ್ನು LROT ಆಧಾರದ ಮೇಲೆ ಗುತ್ತಿಗೆ ನೀಡಿದಲ್ಲಿ ಗುತ್ತಿಗೆದಾರರು ಬ್ಯಾಂಕ್‌ಗಳಿಗೆ ನೇರವಾಗಿ ಹಣ ಪಾವತಿಸುವುದಿಲ್ಲ, ಗುತ್ತಿಗೆದಾರರು ಕಾರ್ಖಾನೆಯ ಆಡಳಿತ ಮಂಡಳಿಯ ಮುಖಾಂತರ ಮಾಸಿಕವಾಗಿ ಸುಮಾರು 6 ಕೋಟಿಗಳನ್ನು ಪಾವತಿಸುತ್ತಾರೆ. ಈ ಮೊತ್ತವು ಬ್ಯಾಂಕ್ ನೀಡಿರುವ ಸಾಲವನ್ನು ಮರುಪಾವತಿಸುವುದು ಕಷ್ಟಸಾಧ್ಯ ಆದ್ದರಿಂದ LROT ಆಧಾರದ ಮೇಲೆ ಗುತ್ತಿಗೆ ನೀಡುವುದಿಕ್ಕಿಂತ ಮೊದಲು ಬ್ಯಾಂಕ್ ಹಿತದೃಷ್ಟಿಯಿಂದ ಕಾರ್ಖಾನೆಗೆ NCDC ವತಿಯಿಂದ ಆರ್ಥಿಕ ನೆರವು ಪಡೆಯುವುದು.
2. ಕಾರ್ಖಾನೆಯನ್ನು ಪುನಃಶ್ಚೇತನಗೊಳಿಸಲು NCDC ವತಿಯಿಂದ ಆರ್ಥಿಕ ನೆರವು ನೀಡಲು ಸನ್ಮಾನ್ಯ ಮುಖ್ಯಮಂತ್ರಿಗಳ ಬಳಿ ತೆರಳಿ ರಾಜ್ಯ ಸರ್ಕಾರದ ಖಾತ್ರಿ ನೀಡುವಂತೆ ಮನವಿ ಮಾಡಿಕೊಳ್ಳುವುದೊಂದೇ ಮಾರ್ಗ ಎಂದು ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ಸಚಿವರು/ಶಾಸಕರು/ಮುಖಂಡರುಗಳು ಅಭಿಪ್ರಾಯಪಟ್ಟರು.
3. NCDC ವತಿಯಿಂದ ಪಡೆದ ಆರ್ಥಿಕ ನೆರವಿನಿಂದ ಕಾರ್ಖಾನೆಯನ್ನು ಆಧುನೀಕರಣಗೊಳಿಸಿ ಉಳಿದ ನೆರವಿನ ಹಣವನ್ನು OTS ಮುಖಾಂತರ ಸಹಕಾರಿ ಬ್ಯಾಂಕ್‌ಗಳ ಸಾಲಗಳನ್ನು ಮರುಪಾವತಿಸುವುದು.
4. ಅದೇ ರೀತಿ, ಮಹಾತ್ಮ ಗಾಂಧಿ ಸಕ್ಕರೆ ಕಾರ್ಖಾನೆ, ಭಾಲ್ಕಿ ತಾಲ್ಲೂಕು, ಈ ಕಾರ್ಖಾನೆಯು ಸಹ ಹಳೆಯ ಕಾರ್ಖಾನೆಯಾಗಿದ್ದು, ಪ್ರಸ್ತುತ ಆರ್ಥಿಕ ಸಂಕಷ್ಟದಲ್ಲಿರುವುದರಿಂದ, ಸದರಿ ಕಾರ್ಖಾನೆಯಲ್ಲಿ ಎಥಾನಾಲ್ ಘಟಕ ಸ್ಥಾಪನೆ, ಕಾರ್ಖಾನೆಯ ವಿಸ್ತರಣೆ ಹಾಗೂ ಆಧುನೀಕರಣ ಕಾಮಗಾರಿಗಳಿಗೆ ಅಂದಾಜು ರೂ.150.00 ಕೋಟಿಗಳು ಬೇಕಾಗಬಹುದೆಂದು ಅಂದಾಜು ಪತ್ರಿಕೆ ತಯಾರಿಸಿದ್ದು, ಜಿಲ್ಲೆಯ ರೈತರ ಹಿತದೃಷ್ಟಿಯಿಂದ ಸದರಿ ಕಾರ್ಖಾನೆಗೂ NCDC ವತಿಯಿಂದ ರೂ. 150.00 ಕೋಟಿಗಳ ಆರ್ಥಿಕ ನೆರವು ಪಡೆಯಲು ಕ್ರಮ ವಹಿಸುವಂತೆ ಕೋರಿದರು.

ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಇಲಾಖೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವರು ಮಾತನಾಡಿ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ ಅತ್ಯಂತ ಹಳೆಯ ಸಹಕಾರಿ ಸಕ್ಕರೆ ಕಾರ್ಖಾನೆಯಾಗಿದ್ದು, ಸಾವಿರಾರು ರೈತರು ಬೆಳೆದ ಕಬ್ಬನ್ನು ಅರೆಯುತ್ತಿದ್ದು, ಇದು ಬೀದರ್ ಜಿಲ್ಲೆಯ ಜನರ ಜೀವನಾಡಿಯಂತೆ ಕಾರ್ಯನಿರ್ವಹಣೆ ಮಾಡುತ್ತಿತ್ತು. ಇದನ್ನು ಪುನಃಶ್ಚೇತನಗೊಳಿಸಬೇಕು ಮತ್ತು ಬೀದರ್ ಸಹಕಾರಿ ಬ್ಯಾಂಕ್ ಕೂಡ ಬೀದರ್ ಜಿಲ್ಲೆಯಲ್ಲಿ ಅತ್ಯಂತ ಮಹತ್ವ ಪಡೆದಿದ್ದು, ಅದನ್ನು ಸಹ ಬದುಕಿಸಬೇಕಾಗಿರುತ್ತದೆ ಎಂದು ತಿಳಿಸಿದರು.

ಮುಂದುವರೆದು, ಮಾನ್ಯ ಸಚಿವರು ಮಾತನಾಡುತ್ತಾ, ಸರ್ಕಾರದ ವತಿಯಿಂದ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಗೆ ಕನಿಷ್ಟ ರೂ.150 ಕೋಟಿಗಳ ಆರ್ಥಿಕ ನೆರವನ್ನು ಪಡೆಯುವುದು ಅದರಿಂದ ಬರುವ ಹಣದಿಂದ ಏಕಕಾಲಕ್ಕೆ ಅಪೆಕ್ಸ್ ಬ್ಯಾಂಕ್ ಮತ್ತು ಬೀದರ್ ಸಹಕಾರಿ ಬ್ಯಾಂಕ್‌ಗಳು ನೀಡಿರುವ ಅಸಲನ್ನು ತೀರಿಸಬಹುದಾಗಿರುತ್ತದೆ. ಬರೀ LROT ಆಧಾರದ ಮೇಲೆ ಗುತ್ತಿಗೆ ನೀಡಿದಲ್ಲಿ ಅಪೆಕ್ಸ್ ಬ್ಯಾಂಕ್ ಮತ್ತು ಸಹಕಾರಿ ಬ್ಯಾಂಕ್‌ಗಳ ಸಾಲವನ್ನು ಏಕಕಾಲದಲ್ಲಿ ತೀರಿಸಲು ಸಾಧ್ಯವಿಲ್ಲ. ಈ ಸಂಬಂಧ ಮಾನ್ಯ ಅರಣ್ಯ ಜೀವಶಾಸ್ತ್ರ, ಮತ್ತು ಪರಿಸರ ಸಚಿವರು ಮತ್ತು ಬೀದರ್ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಮಾನ್ಯ ಸಹಕಾರ ಸಚಿವರು ಸನ್ಮಾನ್ಯ ಮುಖ್ಯ ಮಂತ್ರಿಗಳ ಬಳಿ ಚರ್ಚಿಸಿ, ರಾಜ್ಯ ಸರ್ಕಾರದಿಂದ ಕಾರ್ಖಾನೆಗೆ ಆರ್ಥಿಕ ನೆರವನ್ನು ನೀಡಲು ಕೋರಬೇಕೆಂದು ತಿಳಿಸಿರುತ್ತಾರೆ.

ಚರ್ಚೆಯ ನಂತರ ಅಂತಿಮವಾಗಿ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಪುನಶ್ಚೇನತಗೊಳಿಸುವ ನಿಟ್ಟಿನಲ್ಲಿ NCDC ಯಡಿ ಸಾಲ ಪಡೆದು ಕ್ರಮವಹಿಸುವುದು ಸೂಕ್ತ ಎಂದು ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರಾಕಟ್ಟೆ ಸಚಿವರು ತಿಳಿಸಿದರು. ಅದರಂತೆ, ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯ ಪ್ರಸ್ತಾವನೆಯನ್ನು NCDC ಯಡಿ ಸಾಲಪಡೆಯಲು ಸರ್ಕಾರದಿಂದ ಗ್ಯಾರಂಟಿ ನೀಡುವಂತೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಲು ತೀರ್ಮಾನಿಸಲಾಯಿತು.

ಮುಂದುವರೆದು, ಮಾನ್ಯ ಅರಣ್ಯ ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು ಕೋರಿರುವಂತೆ ಮಹಾತ್ಮ ಗಾಂಧಿ ಸಕ್ಕರೆ ಕಾರ್ಖಾನೆ, ಭಾಲ್ಕಿ ತಾಲ್ಲೂಕು, ಈ ಕಾರ್ಖಾನೆಯ ಕೋರಿಕೆಯಂತೆ ಎಥಾನಾಲ್ ಘಟಕ ಸ್ಥಾಪನೆ, ಕಾರ್ಖಾನೆಯ ವಿಸ್ತರಣೆ

ಹಾಗೂ ಆಧುನೀಕರಣ ಕಾಮಗಾರಿಯ ರೂ.150.00 ಕೋಟಿಗಳ ಪ್ರಸ್ತಾವನೆಯನ್ನು ಸಹ NCDC ಯಡಿ ಸಾಲ ಪಡೆಯಲು ಸರ್ಕಾರದಿಂದ ಗ್ಯಾರಂಟಿ ನೀಡುವಂತೆ ಕೋರಿ ಸಲ್ಲಿಸಲು ತೀರ್ಮಾನಿಸಲಾಯಿತು.

ಸಭೆಯು ವಂದನಾರ್ಪಣೆಗಳೊಂದಿಗೆ ಮುಕ್ತಾಯಗೊಂಡಿತು.

**ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಸಚಿವರು**

**ಸಹಕಾರ ಸಚಿವರು ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಸಚಿವರು**

**ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು & ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವರು**

-ಕಡತ 2024-4

# GOVERNMENT OF KARNATAKA

No.CI 146 COF 2024

Karnataka Government Secretariat
Vikasa soudha,
Dr.B.R. Ambedkar Veedhi,
Bengaluru. Dated:14.07.2025

**From:**

The Secretary to Government
Commerce and Industries Department
(MSME & Mines)
Dr.B.R.Ambedkar veedhi,
Vikasa Soudha,
**BENGALURU-560 001.**

**To,**

The Managing Director
National Co-operative Development Corporation
No,4, Siri Industrial Area, Hauz Khas.
**NEW DELHI-110 016.**
e-mail id:mdncdc@ncdc.in
Tel:011-26510314

Commerce and Industries Department
Issues section
Received 14/7/25 3.40pm
Vikasa Soudha, Bangalore - 01

Sir,

**Sub:** Financial Assistance to The Bidar Sahakar Sakkare Karkhane Niyamit, Hallikhed (S.F), Humanabad Taluk, Bidar District by the National Co-operative Development Corporation – reg.,

**Ref:**
1. Your Office D.O.letter No.NCDC:10-3/2015-Sugar/297,Dated 23.12.2024.
2. Managing Director, The Bidar Sahakar Sakkare Karkhane Niyamit, Hallikhed (S.F), Humanabad Taluk, Bidar District, office Letter No:BSSK/Adm/S-1/Lease/2024-25, Dated:07.03.2025

******

With respect to the subject cited above and letter at ref.(1), proposal has been received from The Bidar Sahakara Sakkare Karkhane Niyamit, Hallikhed (S.F), Humanabad Taluk, Bidar District, vide letter at ref.(2) to the State Government seeking financial assistance under the "Grant in aid to NCDC for strengthening of the Co-operative Sugar Mills (CSMs)"

.....2

(a copy of the proposal is attached herewith). In the said proposal, The Bidar Cooperative Sugar Factory has requested the loan of Rs.550.00 crore for taking up the works setting up Ethanol plant and Co-generation plant to repay their existing loans. It has also proposed that the said loan of Rs.550.00 crores will be repaid from the income generated from the sale of electricity generated from the existing co-generation facility and other sources.

In the light of the above, the proposal of The Bidar Sahakar Sakkare Karkhane Niyamit, Hallikhed (S.F), Humanabad Taluk, Bidar District is forwarded here with for your consideration, for direct lending by NCDC to sugar factory, on merit and as per extant norms and guidelines. Government of Karnataka will provide the state government guarantee for the said amount sanctioned by NCDC.

While extending the credit, it shall be ensured that careful assessment of need-based requirement for the finance is made, in addition to compliance with other such internal/statutory norms including, *inter alia*, due-diligence, viability, repayment capacity of the borrowing entity and margin requirements. It should be noted that State Government guarantee being offered may not be taken as substitute for satisfactory credit appraisal.

It is also requested that a suitable escrow mechanism be put in place with all relevant stakeholders, for collection of funds / repayments, so that the same may be utilised towards servicing of the said loan.

Action taken in this regard, may kindly be communicated to this office also.

Yours faithfully,

**(SHANTHARAMA)**
Under Secretary to Government
Commerce and Industries Department (Sugar)

ಬೀದರ ಸಹಕಾರ ಸಕ್ಕರೆ ಕಾರಖಾನೆ ನಿಯಮಿತ,

THE BIDAR SAHAKAR SAKKARE KARKHANE LTD.,

HALLIKHED (S.F.), Tq. Humnabad Dist. Bidar-585 415 Karnataka State

No.BSSK/Adm/S-1/Lease/2024-25/ Date 07-03-2025

To,
The Secretary,
Commerce & Industries,
Vikas Soudha,
BANGALORE-01.

Sir,

Sub:- Sanction of N.C.D.C Loan to the Bidar Sahakar Sakkare Karkhane Ltd, Hallikhed(SF), Tq. Humnabad, Dist. Bidar-reg.

****

With reference to the above cited subject, Bidar Sahakar Sakkare Karkhane Ltd, Hallikhed(SF) is an agro based Co-operative sugar factory of the Bidar District working from 1968 having 3500 TCD crushing capacity. The financial position of the karkhane is critical & for its modernization/re-habilitation loan is required at lesser interest. The karkhane is having bank loans as below:

(Rs. In crrores)

| Sl.No. | Name of the Banks | Principle loan | Interest | Total |
|---|---|---|---|---|
| 1) | DCC Bank Ltd, Bidar | 115.60 | 117.04 | 232.64 |
| 2) | Apex Bank Ltd, Bangalore | 44.16 | 66.36 | 110.52 |
| 3) | SBI Kalburgi | 7.67 | 6.00 | 13.67 |
| | TOTAL :- | 167.43 | 189.40 | 356.83 |

The Karkhane is having 173.35 acres land & all Bank loans have been N.P.A. We have written letters to the DCC Bank stating the lease process is under progress before the Government & order has been issued on 10-01-2023 & requested them to waive of the interest on loan under OTS scheme & we will pay the loan amount from the lease amount. But they have not considered our request till today. We have called lease tender on 17-02-2023 & 06-03-2023 twice, but no body has submitted tender. The Commissioner for Cane Development & Director of Sugar has written letters dated 16-10-2023 & 10-09-2024 to Govt. & recommended to consider for modifications of few terms & conditions & Bank loans under OTS scheme. Mean while the auction process of the karkhane property by DCC Bank has been discussed in the meeting dated 18-12-2024 held at Belagavi Suvarna Soudh under the Chairmanship of Hon'ble Minister for Textile, Cane Development & Sugar &

ಬೀದರ ಸಹಕಾರ ಸಕ್ಕರೆ ಕಾರ್ಖಾನೆ ನಿಯಮಿತ,

**THE BIDAR SAHAKAR SAKKARE KARKHANE LTD.,**

HALLIKED (S.F.), Tq. Humnabad Dist. Bidar-585 415 Karnataka State
Reg. No. 1903/RCS/1961, Email: [illegible], web: [illegible]
Ph.: 08483-274778, 274427, Mob.: [illegible]
GSTIN: [illegible]

/21-04-21



Agricltural Marketing and in presence of Minister for Forest & Bidar District incharge Minister, Muncipal Administration Minister, All MLA/MLC of Bidar District, Ex. Minister, Secretary Commerce & Industries, Cane Commissioner & Director of Sugar, Deputy Commissioner, Bidar, Chairman, BSSK Ltd, & CEO of DCC Bank and resolved to held up the auction process and to give the Karkhane on lease on LROT basis & sent the meeting proceedings (copy enclosed).

Meanwhile from NCDC for co-operative sugar factories rehabilitation "Grant-in-Aid to NCDC for strengthening of the co-operative sugar mills (CSMS)" Scheme proposed for sanction of loan.

Therefore the loan from NCDC at lesser interest is helpful to the Bidar Sahakara Sakkare Karkhane Ltd,Hallikhed(SF) for its rehabilitation.

The karkhane is required loan amount of Rs. 350 crrores for settlement all Banks loan under OTS scheme, Rs. 200/- crores for Modernisation of the karkhane machineries & erection of Co-Gen. & ethenol plant i.e., totally Rs. 550/- crores.

In view of the above mentioned points our request may kindly be considered in the interest of Shares holders/employees to recommend for sanction & release of Rs. 550/- crores loan from NCDC to the Bidar Sahakara Sakkare Karkhane Ltd, Hallikhed(SF).

Thanking you,

Yours faithfully,

Managing Drector,
BSSK Ltd, Hallikhed(SF)

C1 2009-5

राष्ट्रीय सहकारी विकास निगम
NATIONAL COOPERATIVE DEVELOPMENT CORPORATION
A Statutory Corporation Under the Ministry of Cooperation,
Government of India
**Sugar Division**

NCDC
Assisting Cooperatives, Always!

2025
**International Year of Cooperatives**
Cooperatives Build a Better World

Tel.No. 011-20862762 / 20862779
Fax : 011-26516032
E-mail: vkdubasi@ncdc.in

4-Siri Institutional Area,
Hauz Khas, New Delhi-110016 India
Website: www.ncdc.in

No. NCDC:7-1/2025-Sugar/164

Dated:06/08/2025

The Secretary,
Commerce and Industries Department
(MSME & Mines), Government of Karnataka,
Dr. B.R Ambedkar Veedhi
Vikasa Soudha ,
Bengaluru, Karnataka-560 001

**Sub: Proposal of The Bidar Sahakari Sakkare Karkhane Niyamit, Hallikhed, Karnataka for sanction of term loan of ₹550.00 crore to repay the existing loans & setting up of ethanol plant and co-generation plant under direct funding scheme of NCDC -Reg.**

Sir,

I am directed to refer to your letter No. CI 146 COF 2024 dated 14.07.2025 requesting for sanction of term loan of ₹550.00 crore to The Bidar Sahakari Sakkare Karkhane Niyamit, Hallikhed, Bidar District, Karnataka to repay the existing loans & setting up of ethanol plant and co-generation plant under direct funding scheme of NCDC against the Guarantee of Government of Karnataka as Security and to say that the proposal of the Society has been considered and it is observed that the society does not meet the criteria of NCDC direct funding guidelines for sanction of term loan of ₹550.00 crore.

2. In this connection, it is informed that as the society does not fulfil NCDC direct funding criteria, the State Government of Karnataka may recommend the proposal of The Bidar Sahakari Sakkare Karkhane Niyamit, Hallikhed, Bidar District, Karnataka to NCDC for borrowing funds by the State Government as primary borrower and further pass on the same to the above Cooperative Sugar Mill.

L
DS(S)

भवदीय

(वी के दुबासी)
निदेशक (चीनी)

<u>Copy to:</u>

1) The Bidar Sahakari Sakkare Karkhane Niyamit, Hallikhed, Karnataka- For information.
2) The Regional Director, NCDC, Bengaluru – with a request to follow up with the Government of Karnataka

Signature Not Verified
This document is digitally signed by Vankat Krishna Dubasi, Director, NCDC on 08-Aug-2025

ಅನುಬಂಧ - 6

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಐ 146 ಸಿಓಎಫ್ 2024

ಕರ್ನಾಟಕ ಸರ್ಕಾರದ ಸಚಿವಾಲಯ
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ, ವಿಕಾಸಸೌಧ
ಬೆಂಗಳೂರು, ದಿನಾಂಕ:07.07.2026

**ಇವರಿಂದ:**

ಸರ್ಕಾರದ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಎಂ.ಎಸ್.ಎಂ.ಇ ಮತ್ತು ಗಣಿ)
ವಿಕಾಸಸೌಧ, ಬೆಂಗಳೂರು-560001

**ಇವರಿಗೆ:**

ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು
ಸಿ.ಟಿ.ಎಸ್.ನಂ:4125/1ಬಿ., ಗಣೇಶಪುರ ರಸ್ತೆ, ಲಕ್ಷ್ಮಿಟೆಕ್
ಬೆಳಗಾವಿ-590009

ಮಾನ್ಯರೆ,

**ವಿಷಯ:** ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಎನ್‌ಸಿಡಿಸಿ ಯಿಂದ ಸಾಲ ಪಡೆಯುವ ಬಗ್ಗೆ.

**ಉಲ್ಲೇಖ:**
1. ತಮ್ಮ ಕಚೇರಿ ಪತ್ರ ಸಂಖ್ಯೆ:ಡಿಎಸ್‌ಕೆ/ಸಿಎಓಫ್/ಎನ್‌ಸಿಡಿಸಿ ಅಸಿಸ್ಟೆಂಟ್ಸ್/2024-25, ದಿನಾಂಕ:06.08.2025 & 09.05.2025
2. ನಿರ್ದೇಶಕರು (ಸಕ್ಕರೆ) ಎನ್.ಸಿ.ಡಿ.ಸಿ ನವದೆಹಲಿ ಇವರ ಪತ್ರ ಸಂಖ್ಯೆ: NCDC:7-U2025-Sugar/161,Dated:06.08.2025

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರಗಳತ್ತ ಗಮನ ಸೆಳೆಯಲಾಗಿದೆ. ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ, ಸೋಮೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆ, ಸಂಗಮ ಸಹಕಾರಿ ಸಕ್ಕರೆ ಕಾರ್ಖಾನೆ, ನಂದಿ ಸಹಕಾರಿ ಸಕ್ಕರೆ ಕಾರ್ಖಾನೆ, ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ ಮತ್ತು ಭೀಮಾಶಂಕರ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಎನ್.ಸಿ.ಡಿ.ಸಿ ಯಿಂದ ಸಾಲ ಪಡೆಯುವ ಕುರಿತಂತೆ ಎನ್.ಸಿ.ಡಿ.ಸಿ ನವದೆಹಲಿ ಇವರೊಂದಿಗೆ ಸಮಾಲೋಚಿಸಲಾಗಿರುತ್ತದೆ. ಅರ್ಹತಾ ಸಮಸ್ಯೆಗಳಿಂದಾಗಿ ಎನ್.ಸಿ.ಡಿ.ಸಿ.ಯು ನೇರ ಹಣಕಾಸು ಮಾದರಿಗಳನ್ನು ಸ್ಪಷ್ಟವಾಗಿ ತಿರಸ್ಕರಿಸಿರುವುದರಿಂದ, ಪ್ರಸ್ತಾಪಿತ ಆರು ಸಕ್ಕರೆ ಕಾರ್ಖಾನೆಗಳ ಹಣಕಾಸು ಖಾತೆಗಳ (financial portfolios) ಪುನರ್ ರಚನೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ

Commerce and Industries Department
Receipts and issues Section
Vikasa Soudha, Bangalore - 01

(ಪವಿತ್ರ)
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ(ಸಕ್ಕರೆ)